₹ 5/-

# ನೇಸರು

ತಿಂಗಳೋಲೆ

PAGES 20

FEBRUARY 2025 | Nesaru Tingalole | Vol. XLIII - 02

## Mysore Association's Centenary Year

## ಮೈಸೂರು ಅಸೋಸಿಯೇಷನ್ನಿನ ಶತಮಾನೋತ್ಸವದ ವರ್ಷ



ಮೈಸೂರು ಅಸೋಸಿಯೇಷನ್ನಿನ ಮೊಟ್ಟ ಮೊದಲ ಅಧ್ಯಕ್ಷರಾಗಿದ್ದ
ರಾಜ ಸೇವಾಸಕ್ತ ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ (1926–30)

100 Years

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065
Email : mysoreassociation.mumbai@gmail.com

# ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗ ಹಾಗೂ ಮೈಸೂರು ಅಸೋಸಿಯೇಷನ್ ಮುಂಬೈ ಇವರ ಸಂಯುಕ್ತ ಆಶ್ರಯದಲ್ಲಿ ಎರಡು ದಿನಗಳ ದತ್ತಿ ಉಪನ್ಯಾಸ ಕಾರ್ಯಕ್ರಮ


















ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ
ಮಾಲಿಕೆಯಲ್ಲಿ ಜನವರಿ 25 ಹಾಗೂ 26ರಂದು ನಡೆದ
ಎರಡು ದಿನದ ಉಪನ್ಯಾಸದ ಕಾರ್ಯಕ್ರಮದ ಕೆಲವು ರಸ ನಿಮಿಷಗಳು.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.
****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

ನೇಸರು ತಿಂಗಳೋಲೆ
ಸಂಪುಟ - 43 ಫೆಬ್ರವರಿ- 2025 ಸಂಚಿಕೆ-2

## ಹಿಂದೂಗಳ ಸಾಮೂಹಿಕ ತೀರ್ಥಯಾತ್ರೆ – ಮಹಾಕುಂಭಮೇಳ



**✍ ಡಾ. ಜ್ಯೋತಿ ಸತೀಶ್**

ಇಂದು ಎಲ್ಲರ ಚಿತ್ತ ಮಹಾಕುಂಭ ಮೇಳದತ್ತ. ಪ್ರತಿ ಮೂರು ವರ್ಷಗಳಿಗೊಮ್ಮೆ ಕುಂಭಮೇಳ, ಆರು ವರ್ಷಗಳಿಗೊಮ್ಮೆ ಅರ್ಧ ಕುಂಭಮೇಳ, ಹನ್ನೆರಡು ವರ್ಷಗಳಿಗೊಮ್ಮೆ ಪೂರ್ಣಕುಂಭಮೇಳ ಮತ್ತು 144 ವರ್ಷಗಳಿಗೊಮ್ಮೆ ಮಹಾಕುಂಭಮೇಳವನ್ನು ಆಚರಿಸಲಾಗುತ್ತದೆ. ಈ ಕುಂಭಮೇಳ ಹಿಂದೂಗಳಿಗೆ ಸಾಮೂಹಿಕ ತೀರ್ಥಯಾತ್ರೆ ಇದ್ದಂತೆ. ಸನಾತನ ಧರ್ಮದ ಅತ್ಯಂತ ಪ್ರಸಿದ್ಧ ಹಾಗೂ ಪವಿತ್ರವಾದ ಮತ್ತು ಧಾರ್ಮಿಕ ಮೇಳವಾದ ಕುಂಭವು ಜಗತ್ತಿನಾದ್ಯಂತ ಅತಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಹರಿದ್ವಾರ, ಉಜ್ಜೈನಿ, ಪ್ರಯಾಗರಾಜ್ ಮತ್ತು ನಾಸಿಕ್ ನಲ್ಲಿ ಈ ಕುಂಭಮೇಳಗಳನ್ನು ಆಯೋಜಿಸಲಾಗುತ್ತದೆ. ಈ ಬಾರಿಯ ಮಹಾಕುಂಭಮೇಳವನ್ನು ಅಲಹಾಬಾದ್‌ನ ಪ್ರಯಾಗ್‌ರಾಜ್ ಇಲ್ಲಿ ಹಮ್ಮಿಕೊಳ್ಳಲಾಗಿದೆ. ಗ್ರಹಗಳ ಗೋಚರ ಮತ್ತು ಸ್ಥಾನದೊಂದಿಗೆ ಈ ಕುಂಭಮೇಳಗಳು ಸಂಬಂಧವನ್ನು ಹೊಂದಿವೆ ಎಂದು ಹೇಳಲಾಗುತ್ತದೆ. ಮೇಷರಾಶಿಯಲ್ಲಿ ಗುರು ಮತ್ತು ಸೂರ್ಯ ಪ್ರವೇಶಿಸಿದಾಗ ಹಾಗೂ ಮಕರ ರಾಶಿಗೆ ಚಂದ್ರನು ಪ್ರವೇಶಿಸಿದಾಗ ಅಮವಾಸ್ಯೆ ದಿನದಂದು ಕುಂಭಹಬ್ಬವನ್ನು ಪ್ರಯಾಗ್‌ರಾಜ್ ಇಲ್ಲಿ ನಡೆಸಲಾಗುತ್ತದೆ.

ಈ ಕುಂಭ ಮೇಳಕ್ಕೆ ಪೌರಾಣಿಕ ಹಿನ್ನೆಲೆಯೂ ಇದೆ ಎಂಬ ಪ್ರತೀತಿ ಇದೆ. ಹಿಂದೆ ಸಮುದ್ರ ಮಂಥನದ ಸಮಯದಲ್ಲಿ ಅದರಲ್ಲಿ ಸಿಕ್ಕ ಅಮೃತ ಕಳಶಕ್ಕಾಗಿ ದೇವತೆಗಳು ಮತ್ತು ರಾಕ್ಷಸರು ಕಿತ್ತಾಡುವಾಗ, ಅದರಿಂದ ನಾಲ್ಕು ಹನಿಗಳು ಹರಿದ್ವಾರ, ಉಜ್ಜೈನಿ, ಪ್ರಯಾಗರಾಜ್ ಮತ್ತು ನಾಸಿಕ್ ನಲ್ಲಿ ಚೆಲ್ಲಿದ್ದರಿಂದ ಈ ನಾಲ್ಕು ಸ್ಥಳಗಳು ಪವಿತ್ರವಾದವು ಎಂಬ ದಂತಕಥೆಯೂ ಇದೆ. ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ತ್ರಿವೇಣಿ ಸಂಗಮದಲ್ಲಿ ಮುಳುಗೆದ್ದು ಸ್ನಾನ ಮಾಡಿದರೆ, ಎಲ್ಲ ಪಾಪಗಳಿಂದ ಮುಕ್ತಿ ಪಡೆಯಬಹುದು ಎಂದು ಅನಾದಿಕಾಲದಿಂದಲೂ ನಂಬಿಕೊಂಡು ಬಂದಿದ್ದಾರೆ. ಈ ಸಂದರ್ಭದಲ್ಲಿ ಮಕರ ಸಂಕ್ರಾಂತಿ, ಮೌನಿ ಅಮವಾಸ್ಯೆ, ಬಸಂತ ಪಂಚಮಿ ಹಾಗೂ ಮಹಾಶಿವರಾತ್ರಿಯಂದು ಇಲ್ಲಿ ಶಾಹಿಸ್ನಾನವನ್ನ ಆಯೋಜಿಸಲಾಗುತ್ತದೆ. ಈ ದಿನಕ್ಕಾಗಿ ಪ್ರಪಂಚದ ಮೂಲೆ ಮೂಲೆಯಿಂದ ಭಕ್ತಾಧಿಗಳು ಪ್ರವಾಹದಂತೆ ಬಂದು ಸೇರುತ್ತಾರೆ. ಕುಂಭಮೇಳಕ್ಕೆ ಬಂದು ಭೇಟಿಕೊಡುವುದರಿಂದ ಆಧ್ಯಾತ್ಮಿಕ ಶುದ್ಧೀಕರಣವಾಗುತ್ತದೆ. ಹುಟ್ಟು ಮತ್ತು ಸಾವುಗಳ ಚಕ್ರದಿಂದ ವಿಮೋಚನೆಯನ್ನು ಪಡೆಯಬಹುದು. ಒಟ್ಟಾರೆಯಾಗಿ ಸ್ವಯಂ ಶುದ್ಧೀಕರಣ, ಆತ್ಮಸಾಕ್ಷಾತ್ಕಾರ, ವಾಗುತ್ತದೆ ಎಂಬ ನಂಬಿಕೆ ಪಡೆದುಕೊಂಡು ಬಂದಿದೆ.

144 ವರ್ಷಗಳಿಗೊಮ್ಮೆ ಬರುತ್ತಿರುವ ಈ ಮಹಾಕುಂಭಮೇಳವನ್ನು ಕಣ್ತುಂಬ ನೋಡಿ ಸಂಭ್ರಮಿಸಬೇಕೆಂಬ ಆಸೆ ಎಲ್ಲರಲ್ಲೂ ಇದೆ. ಆದರೆ ಎಲ್ಲರಿಗೂ ಸಾಧ್ಯವಿಲ್ಲ. ಜನರ ಕಾಲ್ತುಳಿತಕ್ಕೆ ಬಲಿಯಾದವರನ್ನು ನೋಡಿದರೆ, ದೂರದಿಂದಲೇ ನೋಡಿ ಕೈಮುಗಿದುಕೊಂಡರೆ ಸಾಕು ಎಂಬ ಭಾವನೆಯೂ ಬರುತ್ತದೆ. ನಾವು ಮಾಡುವ ಕರ್ಮ ಶುದ್ಧವಾಗಿರಬೇಕು ಹಾಗೂ ತನು ಮನ ಶುದ್ಧದಿಂದ ಆ ಭಗವಂತನನ್ನು ಎಲ್ಲಿ ಬೇಕಾದರೂ ನಿಂತು, ಸ್ಮರಿಸಿಕೊಂಡರೂ ಭಗವಂತ ಇಲ್ಲವೆನ್ನಲಾರ. ಭಗವಂತನನ್ನು ನಿರ್ಮಲ ಮನಸ್ಸಿನಿಂದ ಹಾಗೂ ಭಕ್ತಿಯಿಂದ ಧ್ಯಾನಿಸಿದರೇ ಅಷ್ಟೇ ಸಾಕು, ಕುಳಿತಲ್ಲೇ, ಏನೂ ಖರ್ಚಿಲ್ಲದೇ ಭಗವಂತನ ಸಾನಿಧ್ಯವನ್ನು ಪಡೆಯಬಹುದು ಎಂದು ನಮ್ಮ ಹಿರಿಯರು ಹೇಳಿರುವ ಮಾತಿನಲ್ಲಿ ಅರ್ಥವಿದೆ. ಅದೇನೇ ಇರಲಿ, 144 ವರ್ಷಗಳಿಗೊಮ್ಮೆ ಬರುವ ಈ ಮಹಾಕುಂಭಮೇಳಕ್ಕೆ ನಾವೆಲ್ಲರೂ ಸಾಕ್ಷಿಯಾಗಿರುವುದಕ್ಕೆ, ನಮ್ಮ ಜೀವಿತ ಕಾಲಕ್ಕೆ ಈ ಒಂದು ಪವಿತ್ರ ಮೇಳವನ್ನು ಕಣ್ತುಂಬಿಸಿಕೊಳ್ಳಲು ಸಾಧ್ಯವಾದುದಕ್ಕೆ ಆ ಭಗವಂತನಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು.

# ಪ್ರವಾಸದ ಅನುಭವ ಕಥನ



✍ **ಡಾ| ಸುಮಾ ದ್ವಾರಕಾನಾಥ್**

ಅನುಜಾ ಮಹಿಳಾ ಮಂಡಲದ ಮುಂದಿನ ಪ್ರವಾಸ ಕೊಂಕಣದ ಕಡೆಗೆ. ನನ್ನ ಕಸಿನ್, ಲಂಡನ್ ನಿಂದ ಬಂದವಳು ನನ್ನ ಮಗಳಿಗೆ ೫೦೦ ರೂ ಗಿಫ್ಟ್ ಕೊಟ್ಟಿದ್ದಳು. ಮಗಳಿಗೆ ಒಳ್ಳೆ ಅವಕಾಶವೆಂದು ನನ್ನ ಜೊತೆ ಕೊಂಕಣಕ್ಕೆ ಕರೆದುಕೊಂಡು ಹೋದೆ. ಎಂದಿನಂತೆ, ಹಿರಿಯ ಸದಸ್ಯೆ ಸಾವಿತ್ರಿಯ ಗಂಡ ಮೂರ್ತಿಯೇ ನಮ್ಮ ಮ್ಯಾನೇಜರ್. ಹೊರಟಿತು ನಮ್ಮ ತಂಡ ಅವರ ಮುಂದಾಳತ್ವದಲ್ಲಿ. ಬೆಳಗಿನ ಜಾವವೇ ಹೊರಟು, ಬಸ್ ನಲ್ಲೇ ಇಡ್ಲಿ ಚಟ್ನಿ ತಿಂದು, ಅಂತಾಕ್ಷರಿ ಹಾಡುತ್ತಾ ಮಧ್ಯಾನ್ನದ ಹೊತ್ತಿಗೆ ಲೋಟೆ ಪರಶುರಾಮ್ ತಲುಪಿದೆವು. ಅಲ್ಲಿ ವಿಷ್ಣುವಿನ ಆರನೆ ಅವತಾರವಾದ ಪರಶುರಾಮನ ದೇವಸ್ಥಾನ, ರತ್ನಗಿರಿ ಜಿಲ್ಲೆಯ ಚಿಪ್ಲೂನ್ ಹತ್ತಿರ ಇದೆ. ೧೮ ನೆಯ ಶತಮಾನದಲ್ಲಿ, ವಾಸಿಷ್ಟಿ ನದಿಯ ದಂಡೆಯ ಮೇಲೆ ಭವ್ಯವಾಗಿ ನಿಂತ ಪುರಾತನ ದೇವಾಲಯ. ಅದರ ಶಿಲ್ಪ ಸೌಂದರ್ಯಕ್ಕೆ ಇಂದಿಗೂ ಹೆಸರಾಗಿದೆ. ಹಿಂದೂ ಪುರಾಣದ ಪ್ರಕಾರ ಪರಶುರಾಮನು ತನ್ನ ಬಾಣದಿಂದ ಪಶ್ಚಿಮ ಸಮುದ್ರವನ್ನು ಹಿಂದೆ ಹಾಕಿ ಗೋಮಂತಕ ಅಥವಾ ಗೋವಾ ಅನ್ನು ಸೃಷ್ಟಿಸಿದನೆಂದು ಪ್ರತೀತಿ. ಹಾಗಾಗಿ ಪಶ್ಚಿಮ ಘಟ್ಟವನ್ನು ಪರಶುರಾಮ ಕ್ಷೇತ್ರ ಎಂದೇ ಕರೆಯುವ ರೂಢಿ ಇದೆ.

ಮೂರ್ತಿಯವರು ಮೊದಲೇ ಏರ್ಪಾಡು ಮಾಡಿದ್ದರಿಂದ ಅಲ್ಲಿ ಊಟದ ತಂಗುದಾಣ. ಮಲೆನಾಡಿನ ಪರಿಸರದಲ್ಲಿ ಒಂಟಿ ಮನೆಗಳು. ಕಾಳು ಮೆಣಸಿನ ಬಳ್ಳಿಗಳ ನಡುವೆ, ವೀಳೆದೆಲೆ, ತೆಂಗು, ಅಡಿಕೆ ತೋಟದ ಪರಿಸರದಲ್ಲಿ ಎತ್ತರದ ಹೆಂಚಿನ ಮನೆ. ಮುಂದೆ ಕೆಳಗೆ, ಸಗಣಿ ಸಾರಿಸಿದ ಅಂಗಳ. ತೋಟದ ಬಾವಿಯ ನೀರಿನಲ್ಲಿ ಕೈಕಾಲು ತೊಳೆದ ಮೇಲೆ, ಅಂಗಳದಲ್ಲೇ ನಮ್ಮನ್ನೆಲ್ಲಾ ಊಟಕ್ಕೆ ಕೂಡಿಸಿದರು. ಮುತ್ತುಗದ ಎಲೆಯ ಮೇಲೆ ಬಿಸಿ ಬಿಸಿ ಊಟ, ಇನ್ನೂ ಅದರ ರುಚಿ ಮರೆಯಲಾರದು. ಬಿಸಿ ಚಪಾತಿ, ಉಸಲಿ, ಅಮ್ಟಿ(ಸಾರು) ಅನ್ನ, ಮಜ್ಜಿಗೆ. ನಮಗಂತೂ ಸ್ವರ್ಗಕ್ಕೆ ಮೂರೇ ಗೇಣು.

ಮುಂದೆ ಚಿಪ್ಲೂನ್ ಗೆ ಪಯಣ. ನಮ್ಮ ಕಾರ್ಯದರ್ಶಿಯ ತಮ್ಮ ಅದೇ ಊರಿನವರಾದ್ದರಿಂದ, ಅಲ್ಲಿ ರಾತ್ರಿ ಊಟ ಮತ್ತು ಇಳಿದುಕೊಳ್ಳುವ ವ್ಯವಸ್ಥೆ ಒಂದು ಛತ್ರದಲ್ಲಿ ಮಾಡಿದ್ದರು. ಬೆಳಗ್ಗೆ ಎದ್ದು ಸ್ನಾನ, ತಿಂಡಿ ಮುಗಿಸಿ ಮಾರ್ಲೇಶ್ವರ ಬೆಟ್ಟಕ್ಕೆ ಹೋದೆವು. ಅಲ್ಲಿಯ ವಿಶಿಷ್ಟತೆ ಕೇಳಿದ್ರೆ ಗಾಭರಿಯಾಗುತ್ತೆ. ಸುಮಾರು ೫೨೦ ಮೆಟ್ಟಲು ಗಳಿರುವ ಬೆಟ್ಟದ ಮೇಲಿರುವ ಗುಹಾಂತರ ಶಿವನ ದೇವಾಲಯ. ದೇವರನ್ನೇನೋ ಭಕ್ತಿಯಿಂದ ಸಂದರ್ಶಿಸಬಹುದು. ಆದರೆ ನಮ್ಮ ಎದೆ ಢವಗುಟ್ಟಿದ್ದೇಕೆಂದರೆ ಆ ಸಣ್ಣಗುಹೆಯಲ್ಲಿ ಲಿಂಗದ ಜೊತೆಗಿದ್ದ ಜೀವಂತ ಹಾವುಗಳು. ತಲೆ ಎತ್ತಿದರೆ, ಕೈ, ಕಾಲಿಗೆ ಎಲ್ಲಿ ತೊಡರುತ್ತವೋ ಎನ್ನುವ ಭಯದಿಂದಲೇ ಶಿವನ ದರ್ಶನ ಮಾಡಿ ಬರಬೇಕಾಯ್ತು. ಒಳಗೆ ಹೋಗದಿರಲೂ ಮನಸ್ಸು ಒಪ್ಪುತ್ತಿಲ್ಲ, ಇದುವರೆಗೂ ಯಾವ ಭಕ್ತರಿಗೂ ಹಾನಿಯಾಗಿಲ್ಲ ಎಂಬ ಭರವಸೆ ನೀಡಿದರೂ, ನಮ್ಮ ಭಕ್ತಿಯ ಬಗ್ಗೆಯೇ ನಮಗೆ ಆತಂಕ. ಅಂತೂ ಭಕ್ತಿಗಿಂತ ಭಯದಿಂದಲೇ ಒಳಗೆ ಹೋಗಿ ಹೊರಬಂದೆವು. ನಿಜವಾಗಲೂ ಅದೊಂದು ಭಯಾನಕ ಅನುಭವ. ಅಲ್ಲಿಂದ ಬೇಗ ಪಾರಾಗಿ, ಮಧ್ಯಾನ್ಹ ಹತ್ತಿರವಿದ್ದ ಶ್ರೀ ಸದ್ಗುರು ದಿಗಂಬರದಾಸ್ ಮಹರಾಜ ಅವರು ನಿರ್ಮಿಸಿರುವ ಡೇರವಣ್- ಶಿವಸೃಷ್ಟಿ ಎನ್ನುವ ಜಾಗಕ್ಕೆ ಹೋದೆವು. ಬುರುಜಿನ ಆಕಾರದಲ್ಲಿ ಶ್ರಿ ಸಮರ್ಥ ಗಢ್ ಎನ್ನುವ ಹೆಸರಿನಲ್ಲಿ, ಛತ್ರಪತಿ ಶಿವಾಜಿ ಮಹಾರಾಜರ ಜೀವನ ಚರಿತ್ರೆಯನ್ನು ವಿಗ್ರಹಗಳ ಮೂಲಕ ಕಣ್ಣಿಗೆ ಕಟ್ಟುವಂತೆ ಪ್ರದರ್ಶನ ಮಾಡಿದ್ದಾರೆ. ಅಲ್ಲಿಯ ವಿಶೇಷತೆ ಏನೆಂದರೆ ಹೆಣ್ಣು ಮಕ್ಕಳು ಸೀರೆ ಅಥವಾ ಲಂಗ ದಾವಣಿ ಉಟ್ಟು ಬರಬೇಕು. ಗಂಡಸರು ಮೈ ತುಂಬಾ ಬಟ್ಟೆ ಧರಿಸಿರಬೇಕು. ಅಡ್ಡಾದಿಡ್ಡಿ ಪ್ರವೇಶವಿಲ್ಲ. ಬಹಳ ಕಠೋರ ನಿಯಮ. ಅಂತೇ ನಮ್ಮ ಜೊತೆ ಬಂದಿದ್ದ ಹೆಣ್ಣು ಮಕ್ಕಳಿಗೆ ಅವರ ಪಂಜಾಬಿ ಡ್ರೆಸ್ ಮೇಲೇ ಸೀರೆ ಸುತ್ತಿ ಕರೆದುಕೊಂಡು ಹೋದೆವು.

ಅವತ್ತು ಚಿಪ್ಲೂನ್ ನಲ್ಲೇ ತಂಗಿ ಮಾರನೆದಿನ ಬೆಳಗ್ಗೆ ಸ್ನಾನ ತಿಂಡಿ ಮುಗಿಸಿ ಗಣಪತಿ ಫುಲೆಗೆ ಹೊರೆಟೆವು. ಅಲ್ಲಿಯ ಸ್ಥಳ ಪುರಾಣದ ಪ್ರಕಾರ, ಸ್ತ್ರೀಯೊಬ್ಬಳು ಮಾಡಿದ ಗಣಪತಿಯು ತನ್ನಮೂಲ ಸ್ಥಳವಾದ ಗುಳೆಯನ್ನು ಬಿಟ್ಟು ಫುಲೆಗೆ ಬರುತ್ತಾನೆ. ಹೀಗಾಗಿ ಆ ಜಾಗಕ್ಕೆ ಗಣಪತಿ ಫುಲೆಯೆಂದು ಹೆಸರು ಬಂದಿದೆ. ಸುಮಾರು ೪೦೦ ವರ್ಷಗಳ ಪುರಾತನ ಸ್ವಯಂಭೂ ಗಣಪತಿಯನ್ನು ಇಲ್ಲಿ ಕಾಣುತ್ತೇವೆ. ಎದುರಿಗೇ ಸುಂದರವಾದ ಅರಬ್ಬೀ ಸಮುದ್ರದ ಮರಳ ದಂಡೆ ಇದೆ. ಸುಂದರ ಸಂಜೆಯ ಸೂರ್ಯಾಸ್ತವನ್ನು ನಾವೆಲ್ಲರೂ ಸಮುದ್ರ ದಂಡೆಯಲ್ಲಿ ನೋಡಿ ತಣಿದೆವು.

ಅಲ್ಲಿ ನನ್ನ ಮನಸ್ಸನ್ನು ಸೆಳೆದ ಇನ್ನೊಂದು ದೃಶ್ಯವೆಂದರೆ, ಮರಾಠಿ ಕುಟುಂಬಗಳು ತಮ್ಮ ಮನೆಯ ಹಿರಿಯರನ್ನೂ ಕರೆದುಕೊಂಡು ಬಂದು ಮೊಮ್ಮಕ್ಕಳಾದಿಯಾಗಿ ಪ್ರವಾಸದ ಆನಂದವನ್ನು ಸವಿಯುತ್ತಿದ್ದುದು. ಈಗ್ಗೆ ಸುಮಾರು ೨೫ ವರ್ಷದ ಹಿಂದೆ ನಮ್ಮ ಕಡೆ ಹಿರಿಯರಿಗೆ ಕೈಲಾಗೊಲ್ಲ ಎನ್ನುವ ನೆವದಿಂದ ಅವರನ್ನು ಬಿಟ್ಟೇ ಪ್ರವಾಸ ಏರ್ಪಡಿಸುತ್ತಿದ್ದುದು ನೆನಪಿಗೆ ಬಂತು. ಈಗೆಲ್ಲಾ ಕಾಲ ಬದಲಾಗಿದೆ. ಹಿರಿಯರೆಲ್ಲರೂ ತಮ್ಮ ಗುಂಪಿನೊಡನೆ ಜೀವನದ ಆನಂದ ಪಡೆಯಲು ಸಾಕಷ್ಟು ಅನುಕೂಲತೆಗಳಿವೆ. ಹಿರಿಯರೂ ಸಾಕಷ್ಟು ಉತ್ಸಾಹ ತೋರಿಸುತ್ತಿರುವುದು ಆನಂದದಾಯಕ ವಿಷಯವಾಗಿದೆ.

ಮುಂದಿನ ವರ್ಷ ಉತ್ತರ ಕರ್ನಾಟಕದ ಕಡೆ ನಮ್ಮ ದೃಷ್ಟಿ ಬಿತ್ತು. ಸರಿ ನಕ್ಷೆ ತಯಾರಾಯಿತು. ಮೊದಲಿಗೆ ದತ್ತಪೀಠವಾದ ನರಸೋಬಾವಾಡಿಯಿಂದ ನಮ್ಮ ಪ್ರವಾಸ ಶುರುವಾಯಿತು. ಯಥಾಪ್ರಕಾರ ಬೆಳಗ್ಗೆ ಹೊರಟು,

ರಾತ್ರಿ ಹೊತ್ತಿಗೆ ಮಂದಿರದ ವಸತಿಯಲ್ಲಿ ಉಳಿದುಕೊಂಡೆವು. ಊಟದ ವ್ಯವಸ್ಥೆಯೂ ಇದ್ದುದರಿಂದ ಉಂಡು ಮಲಗಿದೆವು. ಬೆಳಗ್ಗೆ ಸ್ನಾನ ತಿಂಡಿ ಮುಗಿಸಿ ಮಂದಿರದ ದರ್ಶನಕ್ಕೆ ಹೊರಟರೆ ಬೀದಿಉದ್ದಕ್ಕೂ ನಮ್ಮ ಹಿಂದೂ ಸಂಸ್ಕೃತಿಯ ಪ್ರತೀಕವಾಗಿ, ಪ್ರತಿಯೊಂದು ಮನೆಯ ಮುಂದೆಯೂ ಅಂಗಳ ಸಾರಿಸಿ ವಿನ್ಯಾಸಗೊಂಡ ವಿವಿಧ ರೀತಿಯ ರಂಗೋಲಿಗಳು ನಮಗೆ ಸ್ವಾಗತಿಸುತ್ತಿರುವಂತೆ ಕಾಣುತ್ತಿತ್ತು. ಅದು ಕೊಲ್ಹಾಪುರ ಜಿಲ್ಲೆಯ, ಸಾಂಗ್ಲಿಯ ಹತ್ತಿರ, ಕೃಷ್ಣಾ ನದಿಯ ದಂಡೆಯ ಮೇಲಿರುವ ಒಂದು ಧಾರ್ಮಿಕ ಸ್ಥಳ. ಪಂಚಗಂಗಾ ನದಿಯೂ ಕೃಷ್ಣೆಯನ್ನು ಸೇರುವ ಸಂಗಮ ಸ್ಥಳ. ಶ್ರೀ ಸರಸ್ವತಿ ನರಸಿಂಹ ಸ್ವಾಮಿ ದತ್ತದೇವ ಮಂದಿರ, ನರಸಿಂಹವಾಡಿ ಅಥವಾ ನರಸೋಬಾಚಿ ವಾಡಿ ಎಂದು ಪ್ರಸಿದ್ಧವಾಗಿದೆ. ಇಲ್ಲಿ ಯಾವ ಮೂರ್ತಿಯೂ ಮಂದಿರದಲ್ಲಿಲ್ಲ. ದತ್ತಗುರುಗಳ ಪಾದುಕೆಗಳು ಮಾತ್ರ ಇದೆ. ಮಂದಿರವು ಕೆಲವು ಸಲ ಮಳೆಗಾಲದ ನೀರಿನಲ್ಲಿ ಮುಳುಗಿರುವುದೂ ಇದೆ. ನದಿಯ ಮುಂದೆ ಇರುವ ದತ್ತಾತ್ರೇಯನ ಆವಾಸ ಸ್ಥಾನವಾದ ಔದುಂಬರ ವೃಕ್ಷಕ್ಕೇ ಜನರು ಪೂಜೆ ಮಾಡುವ ಪದ್ಧತಿ ಇದೆ. ಮಂದಿರದ ಸುತ್ತ ಗುರು ಚರಿತ್ರೆಯನ್ನು ಪಠಣಮಾಡುವ ಅನೇಕ ಭಕ್ತರನ್ನೂ ನೋಡಿದೆವು.

ಮುಂದೆ ಗಾಣಿಗಾಪುರಕ್ಕೆ ಪಯಣ. ದತ್ತ ಮಹಾರಾಜರು ಶ್ರೀ ನರಸಿಂಹ ಸರಸ್ವತಿ ರೂಪದಲ್ಲಿ ಸುಮಾರು ೨೪ ವರ್ಷಗಳ ಕಾಲ ಆಳಿದರೆಂದು ಪ್ರತೀತಿ. ಅವರ ಕಾಲದಲ್ಲಿ ಅನೇಕ ಪವಾಡಗಳು ನಡೆದವೆಂಬುದು ಜನರ ನಂಬಿಕೆ. ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳೆಂದರೆ, ನಿರ್ಗುಣ ಪಾದುಕೆ ಇರುವ ದತ್ತಮಂದಿರ, ಭೀಮಾ ನದಿಯ ದಂಡೆಯಲ್ಲಿರುವ ಔದುಂಬರ ವೃಕ್ಷ, ಭೀಮಾ- ಅಮರಜಾ ನದಿಯ ಸಂಗಮ, ಕಾಳೇಶ್ವರ ಮಂದಿರ, ಭಸ್ಮ ಗುಡ್ಡ, ಮತ್ತು ಅಷ್ಟ ತೀರ್ಥ. ಅಲ್ಲಿಯ ಇನ್ನೊಂದು ವಿಶೇಷತೆಯೆಂದರೆ ಅನ್ನದಾನ. ಬಂದ ಭಕ್ತರಿಗೆಲ್ಲಾ ಪ್ರಸಾದದ ರೂಪದಲ್ಲಿ ಊಟ. ಶುಚಿರುಚಿಯಾದ ಊಟವನ್ನು (ಭಕ್ರಿ, ಕಾಳು ಪಲ್ಯ) ವಿತರಿಸುತ್ತಾರೆ. ಜೊತೆಗೇ ದೊಡ್ಡ ಧ್ವನಿಯಲ್ಲಿ ಎಚ್ಚರಿಕೆಯನ್ನೂ ನೀಡುತ್ತಾರೆ. ಇದು ಮಹಾ ಪ್ರಸಾದ, ನೀವು ತಿನ್ನುವಷ್ಟೇ ಹಾಕಿಸಿಕೊಳ್ಳಿ. ಯಾರೂ ಖಂಡಿತಾ ಚೆಲ್ಲಬಾರದು. ಊಟವಾದ ಮೇಲೆ ಅಲ್ಲೇ ಹತ್ತಿರದ ಮೈದಾನದಲ್ಲಿ ನಿರ್ಮಾಣಗೊಂಡಿದ್ದ ದತ್ತ ಜೀವನ ಚರಿತ್ರೆಯ ಪ್ರದರ್ಶನವನ್ನೂ ನೋಡಿ ಬಂದೆವು.

ಮುಂದೆ ನಮ್ಮ ಪಯಣ, ಹಿಂದವಿ ಸಾಮ್ರಾಜ್ಯ ಸ್ಥಾಪಿಸಿದ ಛತ್ರಪತಿ ಶಿವಾಜಿ ಮಹಾರಾಜರು ಆಶೀರ್ವಾದ ಪಡೆದ ಭವ್ಯವಾದ ತುಳಜಾ ಪುರದ ಭವಾನಿ ಮಂದಿರಕ್ಕೆ. ಇದು ಸುಮಾರು ೧೨ನೆ ಶತಮಾನದಲ್ಲಿ ಕಟ್ಟಿದ ಮಂದಿರ. ದೇವಿಯು ರಾಜ್ಯದ ಮೂರೂವರೆ ಶಕ್ತಿ ಪೀಠಗಳಲ್ಲಿ ಒಂದಾದ ಉಗ್ರ ರೂಪಿ ತುಳಜಾಭವಾನಿಯ ದರ್ಶನವನ್ನು ಪಡೆದು ಬಂದೆವು.

ಅಲ್ಲಿಂದ ಪಂಢರಪುರದ ವಿಠೋಬಾನ ದರ್ಶನಕ್ಕೆ ಹೊರಟೆವು. ಅಲ್ಲೂ ನಮಗಾಗಿ ಮಂದಿರದ ಹತ್ತಿರವೇ ರೂಮ್ ಗಳನ್ನು ಮಾಡಿದ್ದರು. ಅಲ್ಲಿ ತಲುಪುವ ಹೊತ್ತಿಗೆ ಸಂಜೆ ಆದ್ರಿಂದ ಊಟ ಮುಗಿಸಿ ಮಲಗಿದೆವು. ಬೆಳಗ್ಗೆ ಎದ್ದು ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡಿ ೫ಗಂಟೆಗೇ ವಿಶ್ವ ರೂಪ ದರ್ಶನಕ್ಕೆ ತುಳಸೀ ಹಾರಗಳನ್ನು ಕೊಂಡು ಮಂದಿರದ ಮುಂದೆ ಕ್ಯೂ ನಿಂತೆವು. ಒಳಗೆ ಹೋಗಲು ನಮಗೆ ಒಂದು ಗಂಟೆ ಮೇಲಾಯಿತು. ಗರ್ಭಗುಡಿಯ ಹತ್ತಿರ ಹೋಗುತ್ತಿದ್ದ ಹಾಗೇ ಅಲ್ಲಿಯ ಪಂಡಾಗಳು ನಮ್ಮ ರೆಟ್ಟೆ ಹಿಡಿದು ಎಳೆದುಕೊಂಡು ದೇವರನ್ನು ಮುಟ್ಟಿಸಿ ಹೊರಗಟ್ಟಿದರು. ನಮ್ಮ ಜೊತೆಯಲ್ಲಿದ್ದ ಒಬ್ಬ ವಿಧವೆಗೆ ಹಣೆಗೆ ಕುಂಕುಮ ತೀಡಿ ಪೈಸಾ ವಸೂಲು ಮಾಡಿದರು. ಮಂದಿರದುದ್ದಕ್ಕೂ ಭಯ, ಭಕ್ತಿ, ಪ್ರೀತಿಯಿಂದ ಒಳಹೋದವರಿಗೆ ಅವರ ನಡೆನುಡಿ ನಮ್ಮನ್ನು ಕಕ್ಕಾಬಿಕ್ಕಿಯಾಗಿಸಿತ್ತು. ಹೊರಗೆ ಪ್ರಾಕಾರದಲ್ಲಿ ಗಟ್ಟಿಮುಟ್ಟಾದ ಪಂಡನೊಬ್ಬನು ಕಾಲ ಕೆಳಗೆ ಒಂದು ಚೌಕವನ್ನು ಹಾಸಿ ಭಕ್ತರಿಂದ ಕಾಣಿಕೆ ವಸೂಲು ಮಾಡುತ್ತಿದ್ದನು. ಅಲ್ಲಿಯ ವಾತಾವರಣ ನೋಡಿ ವಿಠಲ ಯಾಕೆ ಸುಮ್ಮನಿದ್ದಾನೆ ಎನ್ನುವ ಪ್ರಶ್ನೆ ಮೂಡಿಬಂತು. ರುಕ್ಮಿಣಿಯ ಮಂದಿರವನ್ನು ಸಂದರ್ಶಿಸಿ ಹೊರಗೆ ಬಂದೆವು. ಪುರಂಧರ ದಾಸರ ವಿಠಲನನ್ನು ಮನದಲ್ಲೇ ನೆನೆಯುತ್ತಾ ದೇವರ ಭಕ್ತಿ ನಮ್ಮೊಳಗೇ ಉಳಿಯಿತು.

ಅಲ್ಲಿಂದ ಹೊರಟು ಕೊಲ್ಹಾಪುರ ಮಹಾಲಕ್ಷ್ಮಿ ತಲುಪಿದೆವು. ಉದ್ದ ಕ್ಯೂ ನಿಂತು ದೇವಿಯ ದರ್ಶನ ಪಡೆದಿದ್ದಾಯ್ತು. ಅಷ್ಟರಲ್ಲಿ ನನಗೇಕೋ ಮನೆಯ ಕಷ್ಟಗಳೆಲ್ಲಾ ನೆನಪಿಗೆ ಬಂದು ಮನಸ್ಸು ವಿಚಲಿತವಾಗಿತ್ತು. ಹೊರಗಿನ ಪ್ರಾಕಾರದಲ್ಲಿ ಕೂತು ನನಗೆ ಬರುವ 'ಅಮ್ಮಾ ಬಾರಮ್ಮಾ' ಹಾಡನ್ನು ದೊಡ್ಡ ಧ್ವನಿಯಲ್ಲಿ ಹಾಡಲು ಶುರು ಮಾಡಿದೆ. ಜೊತೆಗೆ ಎಲ್ಲರೂ ದನಿಗೂಡಿಸಿದರು. ನನಗೆ ಪಂಢರಪುರದಲ್ಲಿ ಪ್ರಸಾದ ಸಿಕ್ಕಿರಲಿಲ್ಲವೆಂಬ ಕೊರಗೂ ಮನಸ್ಸಿನಲ್ಲಿತ್ತು ತ್ರಿವೇಣಿ ಎಲ್ಲಿದ್ದರೋ ಏನೋ ಬಂದು ನನ್ನ ಮನಸ್ಸು ಅರಿತವರಂತೆ ನನಗೆ ಪ್ರಸಾದ ಕೊಟ್ಟರು. ಆಗ ಸ್ವಲ್ಪ ಮನಸ್ಸಿಗೆ ಸಮಾಧಾನವಾಯಿತು. ಮಂದಿರದ ಸುತ್ತಲಿದ್ದ ಆಭರಣಗಳ ಅಂಗಡಿಯಲ್ಲಿ ಎಲ್ಲರ ಖರೀದಿ ಮುಗಿದ ನಂತರ ಹೊರಟೆವು.

ನಮ್ಮ ಪ್ರವಾಸದ ಕೊನೆಯ ಹಂತವಾಗಿ ಬಿಜಾಪುರ ತಲುಪಿದೆವು. ಅಲ್ಲಿಯ ಬಿಸಿಲ ಬೇಗೆಯಲ್ಲಯೇ ತಂಪಾದ ಗೋಲ ಗುಂಬಜ್ ನೋಡಿ ಬಂದೆವು ಊಟಕ್ಕೆ ಹೋಟೆಲ್ ಗೆ ಹೋದರೆ ಕಿಚ್ಚು ಖಾರದ ಊಟ, ಯಾರಿಗೂ ಸಮಾಧಾನ ತರಲಿಲ್ಲ. ಕೊನೆಗೆ ಎರಡೆರಡು ಲೋಟ ಮಜ್ಜಿಗೆ ಕುಡಿದು ಹೊಟ್ಟೆ ತಂಪು ಮಾಡಿಕೊಂಡೆವು.

ದಾರಿಯಲ್ಲಿ ಬರುವಾಗ ಜೆಜೂರಿಯ ಖಂಡೋಬಾ ಮೂಲಕ ವಾಪಸ್ಸು ಬಂದೆವು. ಆದರೆ ಯಾರಿಗೂ ಬೆಟ್ಟ ಹತ್ತುವ ತಾಕತ್ತು ಇಲ್ಲದಿದುರಿಂದ ನಿಂತಲ್ಲೇ ಕೈ ಮುಗಿದು ಊರಿಗೆ ವಾಪಸ್ಸು ಬಂದೆವು. ವರ್ಷ ವರ್ಷವೂ ಹೊಸ ಹೊಸಾ ಊರುಗಳನ್ನು, ಅದರ ವಿಶೇಷವನ್ನು ನೋಡಲು ಗುಂಪಿನಿಂದ ಸಾಧ್ಯವಾದುದಕ್ಕೆ ಮಂಡಲಕ್ಕೆ ಸದಸ್ಯೆಯರೆಲ್ಲರೂ ಖುಣಿಯಾಗಿದ್ದರು.

# ಪರಕೀಯ



(ಉಮಾ ರಾವ್ ಕಥೆಗಳು) ✍ **ಉಮಾ ರಾವ್**

ದಿನಾ ಸಂಜೆ ಇಲ್ಲಿನವರು ನಾಲ್ಕೂವರೆಯಿಂದ ಸೂರ್ಯ ಮುಳುಗುವವರೆಗೂ ತುಳಸೀ ಕಟ್ಟೆಯ ಸುತ್ತ ಹರಟೆಗೆ ಕೂಡುತ್ತಿದ್ದರು. ಆಗ ಈ ರೀತಿ ಸಮಸ್ಯೆಗಳ ನಿವಾರಣೆಯಾಗುತ್ತಿತ್ತು. ಜೊತೆಗೆ ಬುಷ್‌ನಿಂದ ದೇವೇಗೌಡರ ಆಡಳಿತದವರೆಗೂ ಎಲ್ಲಾ ಇವರ ಮಾತುಗಳಿಗೆ ಒಳಗಾಗುತ್ತಿತ್ತು. ಅಲ್ಲದೇ ಸ್ವಾರಸ್ಯವಾದ ಗಾಳಿಸುದ್ದಿಗಳು, ಈ ಸಂಸ್ಥೆಯ ಬೇರೆ ನಿವಾಸಿಗಳ ಬಗ್ಗೆ ಗುಟ್ಟು ಕಥೆಗಳು ಎಲ್ಲಾ ಸುತ್ತ ತಿರುಗಿ ಅಲ್ಲೇ ಸಾಯುತ್ತಿದ್ದುವು. ಅಲ್ಲಿಂದ ಹೊರಗೆ ಹರಿದಾಡಿ ವಿಷ ಹರಿಸುತ್ತಿರಲಿಲ್ಲ. ಮನದಾಳದ ನೋವುಗಳು ಕಣ್ಣೀರಾಗಿ ಹರಿಯುತ್ತಿದ್ದುವು. ಕೊನೆಗೆ ತಾವೆಲ್ಲಾ ಸೇರಿ ಇಲ್ಲಿ ಬಂದಿರುವುದು ತಮ್ಮ ಆಯ್ಕೆಯಿಂದಲೇ, ಬದುಕಿನ ಈ ಹಂತದಲ್ಲಿ ತಾವೋ ಇನ್ನೆಲ್ಲೂ ಇಷ್ಟು ಸುಖವಾಗಿರಲು ಸಾಧ್ಯವಿರಲಿಲ್ಲ ಎಂಬ ವಿಷಯವನ್ನು ಒಬ್ಬರಲ್ಲಿ ಒಬ್ಬರು ಸ್ಥಾಪಿಸಿ, ಹಾಗೆ ಸ್ಥಾಪಿಸುವುದರಿಂದ ತಾವೂ ನಂಬಿ, ಹಗುರಾಗಿ ಏಳುವ ಹೊತ್ತಿಗೆ ಕತ್ತಲು ಕಾಲಿಟ್ಟಿರುತ್ತಿತ್ತು. ಆದರೆ ಎಲ್ಲರ ಮನಸ್ಸಿನಲ್ಲೂ ತಾವು ಇಲ್ಲಿ ಕೊನೆಯ ದಿನಗಳನ್ನು ಕಳೆಯಲು ಕಾರಣವಾದ ಯಾವುದೋ ಗಾಯ ಪ್ರತಿ ಕ್ಷಣವೂ ಅಂತರಂಗವನ್ನು ಬಗೆಯುತ್ತಲೇ ಇತ್ತು. ಅಂದರೆ ಅದು ಏನು ಎಂಬುದನ್ನು ಯಾರು ಯಾರಿಗೂ ಸ್ಪಷ್ಟ ಪಡಿಸದೇ ತಮ್ಮ ತಮ್ಮ ಘನತೆ ಕಾಪಾಡಿಕೊಂಡಿದ್ದರು.

********

ಇಲ್ಲಿ ಪಟ್ಟಾಂಗ ಹೊಡೆಯುತ್ತಿದ್ದಾಗ ಇವರ ಕೋಣೆಯ ಮೂಲೆಗಳಲ್ಲಿ ಇವರಿಗಾಗಿಯೇ ಕಾದು ಕೂತು ಹೊಂಚು ಹಾಕುತ್ತಿದ್ದ ಒಂಟಿತನ ಇವರು ಮನೆಗೆ ಕಾಲಿಟ್ಟ ಕೂಡಲೇ ಗಬಕ್ಕನೆ ಉಸಿರುಕಟ್ಟಿಸುವಂತೆ ಆಕ್ರಮಿಸಿ, ಬೇರ್ಯಾರಿಗೂ ಪರಿಚಯವಿಲ್ಲದ ಅವರ ಖಾಸಗೀ ಬದುಕುಗಳನ್ನು, ಸಂಕಟಗಳನ್ನು ಎದುರಿಗೆ ನಿಲ್ಲಿಸಿ ಕೈಕಾಲುಗೆಡಿಸಿ, ಆ ಕತ್ತಲು ಕ್ಷಣಗಳಲ್ಲಿ ಅವರ ಮೈ ಬೆವರು ಇಳಿಸುತ್ತಿತ್ತು.

ಸುಂದರಮ್ಮನ ಮಗ ಎಂದೂ ಅವರನ್ನು ಜೊತೆಯಲ್ಲಿ ಬಂದಿರು ಎಂದು ಕರೆದೇ ಇರಲಿಲ್ಲ. ನಿನ್ನ ಪಾಡಿಗೆ ನೀನಿರು, ಬೇಕಾದಷ್ಟು ದುಡ್ಡು ಕಳಿಸ್ತೀನಿ ಎಂದುಬಿಟ್ಟಿದ್ದ. ವರ್ಷಕ್ಕೊಂದು ಸಲ ಆದ್ರೂ ಹೆಂಡತಿ ಮಕ್ಕಳ ಜೊತೆ ಬಾರೋ, ಮೊಮ್ಮಕ್ಕಳನ್ನು ಒಂದು ಸಲ ಆದ್ರೂ ಎತ್ತಿಕೊಂಡು ಸಂತೋಷ ಪಡ್ತೀನಿ ಎಂದು ಎಷ್ಟು ಗೋಗರೆದರೂ ಅವನು ಕರಗಿರಲಿಲ್ಲ. ಸರಸಿಯ ದುಃಖವೇ ಬೇರೆ. ಮಗಳು ಬದುಕಲ್ಲಿ ಸಂತೋಷವಾಗಿರೋಕೆ ಸಾಕಷ್ಟು ಹಣ ಇದ್ದುಬಿಟ್ರೆ ಆಯ್ತು ಅಂತ ಅಪ್ಪ ಅಂದುಕೊಂಡು ಬಿಟ್ರಲ್ಲಾ, ತಾನೂ ರಕ್ತ, ಮಾಂಸದ ಜೀವಿ, ತನಗೂ ಭಾವನೆಗಳು, ಕನಸುಗಳೂ ಇರುತ್ತವೆ ಎಂಬ ಯೋಚನೆ ಅವರ ಮನಸ್ಸಿಗೆ ಬರಲೇ ಇಲ್ಲವಲ್ಲಾ, ಹೆಣ್ಣಾಗಿ ಒಂದು ದಿನ ಸಹಜವಾಗಿ ಬದುಕಲಿಲ್ಲವಲ್ಲಾ ಎಂದು ತುಂಬಾ ನೊಂದುಕೊಳ್ಳುತ್ತಿದ್ದರು.

******

ಝೂನ್ಸಿಬಾಯಿಯ ಪುರಾತನ ಮನೆಯನ್ನು ಅವಳ ಮಗ ರಿನೋವೇಟ್ ಮಾಡಿ ಫೈವ್ ಸ್ಟಾರ್ ಹೋಟೆಲೊಂದಕ್ಕೆ ಹೆರಿಟೇಜ್ ಪ್ರಾಪರ್ಟಿ ಎಂದು ಕೋಟ್ಯಾಂತರ ರೂಪಾಯಿಗಳಿಗೆ ಲೀಜ್ ಗೆ ಕೊಟ್ಟಿದ್ದ. ೧೦೦ ವರ್ಷ ಹಳೆಯ ಶೈಲಿಯ ಕಟ್ಟಡ. ಅಂದಿನವೇ ಮಂಚ, ಕುರ್ಚಿ, ಮೇಜುಗಳು, ಆ ಕಾಲದ ದಿರಿಸು ತೊಟ್ಟು, ಬೆಳ್ಳಿ ತಟ್ಟೆಗಳಲ್ಲಿ ಅಪ್ಪಟ ಕೊಡಗಿನ ಆಹಾರವನ್ನು ತಮ್ಮ ವಿದೇಶೀ ಗ್ರಾಹಕರಿಗೆ ಹಂಚುವ ಕೆಲಸಗಾರರು, ಸ್ಯಾಟಿನ್ ಗುಲಾಬಿಗಳ ನಡುವೆ ಅರಳಿ ನಿಂತಿದ್ದ ತಮ್ಮ ಅತ್ತೆ, ಮಾವನ ಫೋಟೋ "ಎಫೆಕ್ಸ್ "ಗೋಸ್ಕರ ಡೈನಿಂಗ್ ರೂಮಿನಲ್ಲಿ ಎನ್ಲಾರ್ಜ್ ಮಾಡಿಸಿ ಹಾಕಿದ್ದ. ತಾವು ಹೊಸದಾಗಿ ಮದುವೆಯಾಗಿ ಬಂದಾಗ, ತಮ್ಮಿಬ್ಬರಿಗಾಗಿ ಕೈಯ್ಯಾರೆ ಮಾಡಿದ್ದ ಕಸೂತಿ ಕೆಲಸದ ದಿಂಬಿನ ಚೀಲಗಳು, ಲೇಸ್ ಅಂಚಿನ ಮಗ್ಗಲಾಸಿಗೆಗಳು ಈಗ ಮಾಸ್ಟರ್ ಬೆಡ್ ರೂಮಿನಲ್ಲಿ ಆಗಿನ ಕಾಲದ ವಾತಾವರಣ ಸೃಷ್ಟಿಸಲು ಬಳಕೆಯಾಗಿದ್ದವು. ತಮ್ಮ ಅಮೂಲ್ಯ ಖಾಸಗೀ ಬದುಕು ಈ ರೀತಿ ಬಳಕೆಯಾಗುವುದು ಝೂನ್ಸಿಗೆ ತುಂಬಾ ನೋವುಂಟು ಮಾಡಿತ್ತು. ಆದರೆ ಕೋರ್ಟಿಗೆ ಹೋಗಲು ಮನಸ್ಸಾಗದೆ ಝೂನ್ಸಿಬಾಯಿ ಮಗನೊಡನೆ ಪ್ರತಿಸಲ ಅವನು ಫೋನ್ ಮಾಡಿದಾಗಲೂ ಜಗಳ ವಾಡುತ್ತಿದ್ದರು. ಸ್ವಲ್ಪ ದಿನ ತಡೀಮ್ಮಾ, ದುಡ್ಡು ಸೇರಲಿ. ಪ್ರಾಪರ್ಟಿ ವಾಪಸ್ಸು ತಗೋತೀನಿ, ಆಗ ಎಲ್ಲ ಒಟ್ಟಿಗೆ ಮಹಾರಾಜರ ಮನೆಯಂತಿರಬಹುದು ಎಂದು ಅವಳ ಬಾಯಿ ಮುಚ್ಚಿಸುತ್ತಿದ್ದ. ಇನ್ನೇನು ಮಾಡಲೂ ತಿಳಿಯದೆ, ತನ್ನ ಮಗ ಅಷ್ಟು ಆಸ್ತೀನೂ ಹಾಳು ಮಾಡಿ ವಿದೇಶಕ್ಕೆ ಓಡಿ ಹೋಗಿದ್ದಾನೆ. ತಾನು ಬೀದಿಗೆ ಬಂದಿದ್ದೇನೆ ಎಂದು ಆನಂದಾಲಯದಲ್ಲಿ ಸುಳ್ಳು ಹೇಳಿ ಜಾಗ ಗಿಟ್ಟಿಸಿದ್ದರು.

******

ದೀಪ ಆರಿಸಿದರೆ ಸುನೀತಾಗೆ ತನ್ನ ಬಾಲ್ಯದ ಕ್ಷಣಗಳು ಕಾಡುತ್ತಿದ್ದುವು. ಎಷ್ಟು ಚಿಕ್ಕವಳು ತಾನು. ಅಮ್ಮ ಹೋದಮೇಲೆ ದಿನಾ ತನ್ನ ಪಕ್ಕದಲ್ಲಿ ಮಲಗುತ್ತಿದ್ದ ಅಪ್ಪ ಇದ್ದಕ್ಕಿದ್ದಂತೆ ಒಂದು ದಿನ ತನ್ನನ್ನು ಪಕ್ಕದ ಮನೆಯವರೊಡನೆ ಬಿಟ್ಟು ಹೋಗಿ, ೨ ದಿನಗಳ ನಂತರ ಮರಳಿ ಬರುವಾಗ ಕೆಂಪು ಜರೀ ಸೀರೆ, ಹಸಿರು ಗಾಜಿನ ಬಳೆಗಳ ಹೆಂಗಸೊಂದಿಗೆ ಬಂದು ಇವಳು ನಿನ್ನ ಚಿಕ್ಕಮ್ಮ ಅಂದಿದ್ದ. ಅಂದಿನಿಂದ ತನ್ನೊಬ್ಬಳನ್ನೇ ಬಿಟ್ಟು, ತಾನು ಚಿಕ್ಕಮ್ಮನೊಂದಿಗೆ ಪಕ್ಕದ ರೂಮಿನಲ್ಲಿ ಬಾಗಿಲು ಹಾಕಿ ಮಲಗಲು ಶುರು ಮಾಡಿದ್ದ. ಆ ಮೊದಲ ರಾತ್ರಿ ಎಷ್ಟು ಹೆದರಿಕೆಯಾಗಿತ್ತು ತನಗೆ, ಎಲ್ಲೆಲ್ಲೂ ಕತ್ತಲು, ಹೊರಗೆ ಸಿಡಲು ಮಳೆ, ಎಷ್ಟು ಕೂಗಿದರೂ, ಗೋಗರೆದರೂ ಅಪ್ಪನಿಂದ ಉತ್ತರವಿಲ್ಲ. ಮೈ ನಡುಗಿ, ಭಯದಿಂದ ಹಲ್ಲು ಕಟಕಟ ಅಂದಿತ್ತು. ಪ್ರತಿ ರಾತ್ರಿ ದೀಪವಾರಿಸಿದ ಕೂಡಲೇ, ಈ ಗಳಿಗೆಗಳು ಮರುಕಳಿಸುತ್ತಿತ್ತು. ಮೈ ಬೆವರಿ ಮೆಟ್ಟು ಬಿದ್ದು ಏಳಿಸುತ್ತಿತ್ತು. ಭೂತಗಳು ಪ್ರತ್ಯಕ್ಷ. ಅಂದಿನಿಂದ ಇಂದಿನವರೆಗೂ ರಾತ್ರಿಯೆಲ್ಲಾ ದೀಪ ಹಾಕಿಯೇ ಮಲಗುವುದು ಅವಳ ಅಭ್ಯಾಸವಾಗಿ ಹೋಗಿತ್ತು. ಇವತ್ತೇಕೋ ಗಂಟೆ ಒಂದಾದರೂ ಸುಂದರಮ್ಮನಿಗೆ ಊಟಕ್ಕೇಳಲೇ ಮನಸ್ಸಾಗಲಿಲ್ಲ. ಬೆಳಗಾಗೆದ್ದು ತಮಗೆ ಇಷ್ಟವಾದ ಹಾಗಲಕಾಯಿ ಗೊಜ್ಜು, ನಿಂಬೆ ಸಾರು ಮಾಡಿಟ್ಟುಕೊಂಡಿದ್ದರು. ಬಿಸಿ ಮಾಡೋಕೂ ಇಟ್ಟಿದ್ದರು. ಆದರೆ ಹೊಟ್ಟೆ ಎಂದಿನಂತೆ ಚುರುಗುಟ್ಟಲಿಲ್ಲ. ಮತ್ತೆ ಬಚ್ಚಲುಮನೆಗೆ ಹೋಗಿ ಜಾಲರಿ ಕಿಟಕಿಯಿಂದ ಇಣುಕಿ ನೋಡಿದರು. ಸುನಿತಾ ಟೇಬಲ್ ಮೇಲೆ ದಿನದಂತೆ ಅಡಿಗೆ ಪಾತ್ರೆ ಇಟ್ಟುಕೊಳ್ಳುತ್ತಿದ್ದಳು. ಸುಂದರಮ್ಮನವರ ಕೋಪ ನೆತ್ತಿಗೇರಿತು. ಇಷ್ಟೆಲ್ಲಾ ಆಗಿದೆ, ಮಳ್ಳಿ ಹಾಗೆ ಊಟದ ತಯಾರಿ ಮಾಡ್ಕೋತಿರೋದು ನೋಡು. ಯಾರಿಗೆ ಗೊತ್ತು. ಆದರೆ ತಮ್ಮ ಕಣ್ಣುಗಳೇನೂ ಸುಳ್ಳು ಹೇಳುವುದಿಲ್ಲವಲ್ಲಾ, ಇನ್ನೂ ೬ ತಿಂಗಳಾಗಿಲ್ಲ ೪೦,೦೦೦ ಸುರಿದು ಕಣ್ಣಾಪರೇಷನ್ ಮಾಡಿಸಿಕೊಂಡು. ಆ ಡಾಕ್ಟರ್ ಹೇಳಿದ ಹಾಗೆ ಮಗು ದೃಷ್ಟಿ ಥರಾ ತೀಕ್ಷ್ಣವಾಗಿದೆ. ದೊಡ್ಡ ಕನ್ನಡ ಹಾಕಿಕೊಂಡ ಮನುಷ್ಯ ಬಂದದ್ದು, ೨-೩ ಗಂಟೆ ಹೊತ್ತು ಕೂತು ಸುನಿತಾ ಜೊತೆ ಮಾತಾಡಿದ್ದು, ಮಧ್ಯೆ ಮಧ್ಯೆ ಏನೇನೋ ಬರೆದುಕೊಂಡಿದ್ದು ಎಲ್ಲಾ ಕಂಡಿತ್ತು. ಕೂದಲು ಅರ್ಧ ನರೆತಿತ್ತು. ಆದರೆ ಲಕ್ಷಣವಾಗಿದ್ದ. ಅವನಿಗೆ ಎರಡೆರಡು ಸಲ ಕಾಫಿ ಸರಬರಾಜು ಬೇರೆ ಮಾಡಿದ್ದಳು. ಯಾರವನು... ಏನಾದರೂ ತನಗೆ ಗೊತ್ತಿಲ್ಲದ ಸಂಬಂಧ.... ಇರಲಾರದು ಈ ವಯಸ್ಸಿನಲ್ಲಿ... ಅಥವಾ ಪತ್ರಕರ್ತನೋ, ಆಗಾಗ ಆಶ್ರಮಕ್ಕೆ ಬರುತ್ತಿದ್ದರು. ಪೇಪರಿನವರು. ಜರ್ನಲಿಸ್ಟೇ ಇರಬೇಕು. ಇವಳನ್ನು ನೋಡಲು ಎಂದೂ ನೆಂಟರಿಷ್ಟರು ಸ್ನೇಹಿತರು ಬಂದದ್ದೇ ಇಲ್ಲ. ಸಂದರ್ಶನಕ್ಕೇ ಬಂದದ್ದಾದರೆ ಗಂಟೆಗಟ್ಟಲೆ ಮಾತಾಡುವಷ್ಟು ಅವಳಲ್ಲಿ ಸ್ಪೆಶಲ್ ಏನಿದೆ. ಇದೆಲ್ಲಾ ಸುನೀತಾ ತಮಗೇಕೆ ಕೇಳಲಿಲ್ಲ. ಒಂದಿಷ್ಟು ನೆಗಡಿ, ಕೆಮ್ಮು, ಜ್ವರ ಆಯಿತು ಓಡಿ ಬರಬೇಕು ತನ್ನ ಹತ್ತಿರ. ಯಾರೋ ಏನೋ ಬೇಸರವಾಗುವಂಥಾ ಮಾತು ಅಂದರು, ಅಮ್ಮಾ ನೋಡಿ ಹೇಗಂದುಬಿಟ್ಟರೂಂತ ತನ್ನೆದುರು ಹೇಳಿಕೊಳ್ಳಬೇಕು. ಈಗ, ಇಂಥಾ ದೊಡ್ಡ ವಿಷಯ ತನಗೆ ಉಸುರೇ ಇಲ್ಲವಲ್ಲಾ. ತಾನೂ ಎಲ್ಲರ ಹಾಗೆ ನಾಳೆ ಪೇಪರಿನಲ್ಲಿ ಇವಳ ಫೋಟೋ ನೋಡಿ ತಿಳ್ಕೊಬೇಕೇನು. ತಾನೂ ಇನ್ನೆಲ್ಲರಲ್ಲಿ ಒಬ್ಬಳೇನು. ಹೊಟ್ಟೆಯೊಳಗೆ ವಿಚಿತ್ರ ಸಂಕಟ ಮರುಕಳಿಸಿತು. ಇಷ್ಟು ದಿನ ತಾವು ಅಂದುಕೊಂಡಿದ್ದೆಲ್ಲಾ ಸುಳ್ಳೇನು. ಮಾತು ಮಾತಿಗೂ ಅಮ್ಮಾ ಅಮ್ಮಾ ಎನ್ನುತ್ತಿದ್ದವಳು... ಇಷ್ಟೇ ಏನು ಅವಳ ಅಂತಃಕರಣ. ಮಟ್ಟಿಂಗಾಲ ಮೇಲ ನಿಂತೂ ನಿಂತೂ ಕಾಲು ಬೆರಳ ತುದಿಗಳು ಝುಂ ಎನ್ನತೊಡಗಿದ್ದವು. ಗೊಜ್ಜು ಕುದ್ದು ಕುದ್ದು ಸೀದ ವಾಸನೆ ಬಂತು. ಲೊಚಗುಟ್ಟುತ್ತಾ ಅಲ್ಲಿಂದ ಎದ್ದರು.

*******

೪ ಗಂಟೆ ಆಗುವುದನ್ನೇ ಕಾಯುತ್ತಿದ್ದ ಸುಂದರಮ್ಮ ಬೇಗಬೇಗ ತಲೆ ಬಾಚಿಕೊಂಡು ದಿನಕ್ಕಿಂತಾ ೫ ನಿಮಿಷ ಮೊದಲೇ ಹೊರಗೆ ಬಂದು ತುಳಸಿ ಕಟ್ಟೆಯ ಎದುರು ಬೆಂಚಿನ ಮೇಲೆ ಕೂತರು. ಅವರನ್ನು ನೋಡಿ ಸರಸಿ, ಝಾನ್ಸಿಯೂ ಬಂದು ಕೂತರು. ಸುಂದರಮ್ಮನವರ ಮುಖ ಕಪ್ಪಿಟ್ಟು ದುಮುದುಮು ಉರಿಯುತ್ತಿದ್ದದ್ದು ನೋಡಿ ಇಬ್ಬರಿಗೂ ಸ್ವಲ್ಪ ಗಾಬರಿಯಾಯಿತು. ತಮಗೆ ತಿಳಿದಂತೆ ಬೆಳಗ್ಗಿಂದಾ ಅಂಥಾದೇನೂ ನಡೆದಿಲ್ಲ. ಕೊಂಚ ಹೊತ್ತು ಅಸಹನೀಯ ಮೌನ ಆವರಿಸಿತು. ಝಾನ್ಸಿ ಗಡಿಯಾರ ನೋಡಿಕೊಂಡು, ಇದ್ಯಾಕೋ ಸುನೀತ ಇಷ್ಟು ಹೊತ್ತಾದ್ರೂ ಬರಲಿಲ್ಲಪ್ಪಾ ದಿನಾ ಎಲ್ಲರಿಗಿಂತಾ ಮುಂಚೆ ಬಂದು ಕೂತಿರೋಳು ಎಂದದಕ್ಕೆ ಸರಸಿ ನಗುತ್ತಾ ಅಯ್ಯೋ, ಅದಾರೋ ಅವಳ ಇಂಟರ್ವ್ಯೂಗೆ ಬಂದಿದ್ದನಲ್ಲಾ ಊಟ ಲೇಟಾಗಿರಬೇಕು. ಸರಿ, ಹೆಚ್ಚು ನಿದ್ದೆ ಹೊಡೆದಿದ್ದಾಳೆ ಎಂದು ನಕ್ಕರು, "ಯಾವ ಪತ್ರಿಕೇಗ್ರೀ, ನಿಮಗೆ ಹೇಗೆ ಹೊತ್ತಾಯ್ತು" ಎಂದು ಝಾನ್ಸಿ ಕುತೂಹಲ ತೋರಿಸಿದಾಗ, ಸರಸಿ "ಅಯ್ಯೋ ಅದೆಲ್ಲಾ ನಂಗೊತ್ತಿಲ್ಲಪ್ಪಾ. ಬೆಳಗ್ಗೆ ಮನೇಲಿ ಸಕ್ಕರೆ ಮುಗಿದು ಹೋಗಿತ್ತು. ತರೋಕೇಂತ ಸುನೀತ ಮನೆಗೆ ಹೋದೆ. ಆಗ ಆತ ಅಲ್ಲಿ ಕೂತಿದ್ರುಲ್ಲಾ, ಪರಿಚಯ ಮಾಡಿಸಿದ್ದು ಅಷ್ಟೇ. ಡೀಟೇಲ್ಸೆಲ್ಲ ಸುಂದರಮ್ಮನಿಗೆ ಗೊತ್ತಿರಬೇಕು, ಏನ್ರೀ" ಎಂದು ಅವರತ್ತ ನೋಡಿದಾಗ, ಸುಂದರಮ್ಮ ಗೊತ್ತಿಲ್ಲ ಎಂದು ಬಾಯಿ ಬಿಟ್ಟು ಹೇಳಲಾಗದೆ, ಅವಮಾನ ದಿಂದ ಕುಗ್ಗಿ ಹೋದರು. ಅಷ್ಟು ಹೊತ್ತಿಗೆ ಸರಿಯಾಗಿ ಗರಿಮುರಿ ಸ್ಟಾರ್ಚ್ ಮಾಡಿದ ಗುಲಾಬಿ ಬಣ್ಣದ ಸೀರೆ ಉಟ್ಟು ಸುನೀತ ನಡೆದು ಬಂದಳು. ಸುಂದರಮ್ಮನವರಿಗೆ

ಅವಳ ನಡಿಗೆಯಲ್ಲಿ ಹೊಸ ಹಗುರತೆ ಕಂಡು ಬಂದಿತು. ಎಷ್ಟು ಚೆನ್ನಾಗಿ ಕಾಣ್ತಿದ್ದಾಳೆ ಅನ್ನಿಸಿ ಇನ್ನೂ ಹೊಟ್ಟೆ ಉರಿಯಿತು.

ಝೂನ್ಸಿ ಜೋರಾಗಿ "ಕಂಗ್ರಾಟ್ಸ್ ಸುನೀತಾ, ಏನೋ ಸಂದರ್ಶನ ಅಂತೆ, ದೊಡ್ಡ ಸೆಲೆಬ್ರಿಟಿ ಆಗಿ ಬಿಟ್ರಿ" ಅಂದದ್ದಕ್ಕೆ ಅವಳು ನಕ್ಕು, "ಹಾಗೇನೂ ಇಲ್ಲ, ಸ್ವತಃ ತಮ್ಮ ಆಯ್ಕೆಯಿಂದ ಒಂಟಿಯಾಗಿ ಬಾಳುತ್ತಿರುವ ದಿಟ್ಟ ಮಹಿಳೆಯರ ಬಗ್ಗೆ ಒಂದು ಸೀರೀಸ್ ಬರೆಯುತ್ತಿದ್ದಾರಂತೆ. ಅದಕ್ಕೇ ನನ್ನ ಜೊತೇನೂ ಮಾತಾಡೋಕೆ ಬಂದಿದ್ದರು" ಎಂದು ವಿವರಣೆ ಕೊಟ್ಟಳು. "ಏನೇನು ಕೇಳಿದ್ರು" ಎಂದು ಬಾಯಿ ಹಾಕಿದ ಸರಸಿಗೆ 'ನನ್ನ ಬದುಕಿನ ಬಗ್ಗೆ ಎಲ್ಲಾ ಕೇಳಿದರು. ಬಾಲ್ಯ, ವಿದ್ಯಾಭ್ಯಾಸ, ಕಾಲೇಜು, ಆಮೇಲೆ ಟೀಚರ್ ಕೆಲಸದ ದಿನಗಳು ಎಲ್ಲಾ. ಅಯ್ಯೋ, ಫುಲ್ ಪೇಜ್ ಲೇಖನ ಅಂತೆ, ಏನಷ್ಟು ನೆನಪಿರುತ್ತೆ ಚಿಕ್ಕಂದಿಂದ..."

ಇಷ್ಟು ಹೊತ್ತು ತುಟಿಕ್ ಪಿಟಿಕ್ ಎನ್ನದೆ ಕೂತಿದ್ದ ಸುಂದರಮ್ಮನ ಮುಖ ಈಗ ವಿಚಿತ್ರವಾಗಿ ತಿರುಗಿಕೊಂಡು ಸೊಟ್ಟಗಾಯಿತು. ತುಟಿಗಳು ಸಣ್ಣಗೆ ಅದುರತೊಡಗಿದವು. ಮುಖದ ಮೇಲೆ ನೀಲಿ ಛಾಯೆ ಹರಡಿ, ನೋಡುವವರಿಗೆ ಭಯ ಹುಟ್ಟಿಸುವಂತಾಯ್ತು.

"ಯಾಕೆ, ನನ್ನನ್ನು ಕರೆದಿದ್ರೆ ಎಲ್ಲ ನೆನಪು ಮಾಡಿ ಕೊಡುತ್ತಿದ್ದೆ." ಗೊಗ್ಗರು ಧ್ವನಿಯಲ್ಲಿ ಮಾತಾಡಿದರು. ಈ ಪ್ರತಿಕ್ರಿಯೆ ನಿರೀಕ್ಷಿಸದಿದ್ದ ಸುನೀತಾ ಹೆದರುತ್ತ' "ಆಂ ನಿಮಗೆ ತಾನೇ ಏನು ಗೊತ್ತಮ್ಮಾ ನನ್ನ ಬಾಲ್ಯದ ವಿಷಯ, ಇಲ್ಲಿ ಬಂದಮೇಲೆ ತಾನೇ ಪರಿಚಯ ಆದದ್ದು..." ಎಂದು ತಡವರಿಸಿದಳು.

" ಎಷ್ಟು ಸಲ ಹೇಳಿದ್ದೀನಿ ನಾನು ನಿಮ್ಮೂರಿನವಳೆ ಅಂತ. ನಾನು ನಿನಗಿಂತ ಎಷ್ಟು ದೊಡ್ಡೋಳು ನಿನಗೆ ಗೊತ್ತೇ ಇದೆ. ನಿನ್ನ ಬಾಲ್ಯ ನಿನಗಿಂತ ನನಗೆ ಚೆನ್ನಾಗಿ ನೆನಪಿದೆ. ತಪ್ಪು ಮಾಡಿದೆ ಸುನೀತಾ... ಹೂಸಿದ್ದು ಕೆಮ್ಮಿದ್ದಕ್ಕೆಲ್ಲಾ ಓಡಿ ಬರ್ತಿಯಾ ನನ್ನ ಹತ್ತಿರ ಅಮ್ಮ, ಅಮ್ಮ ಅಂತ. ನಾನೆಲ್ಲಾ ವಿವರವಾಗಿ ಹೇಳಿದ್ರೆ ಅವ್ರಿಗೆ ಗೊತ್ತಾಗಿರೋದು ನೀನೇನೆಲ್ಲಾ ಬವಣೆ ಪಟ್ಟಿದ್ದೀಯಾಂತ, ಎಲ್ಲಿಂದ ಎಲ್ಲಿಗೆ ಬಂದಿದೀಯಾಂತ, ಆಗ ನಿನ್ನ ಸಂದರ್ಶನ ಇನ್ನೂ ಪರಿಣಾಮಕಾರಿಯಾಗಿರೋದು..." ಎಂದು ತಡವರಿಸುತ್ತಾ ನಿಧಾನವಾಗಿ ಹರಿದ ಸುಂದರಮ್ಮನವರ ಕಂಠದಲ್ಲಿ ಶೀತಲ ಕ್ರೌರ್ಯ ತುಂಬಿರುವುದು ಎಲ್ಲರಿಗೂ ಭಾಸವಾಯಿತು. ಸುನೀತಾ ಸಾವರಿಸಿಕೊಳ್ಳಲು ಪ್ರಯತ್ನಿಸಿದಳು.


"ಏನ್ಕೇಳ್ತೀರಿ ಸರಸಿ, ಇವಳು ಇನ್ನೂ ೩ ವರ್ಷದವಳು, ಅವಳಮ್ಮ ಯಾವುದೋ ಶೆಟ್ಟಿ ಜೊತೆ ಓಡಿಹೋದಾಗ. ಇವಳಪ್ಪ ಸ್ವಲ್ಪ ದಿನಕ್ಕೆ ಇವಳಿಗೊಂದು ಮಲ ತಾಯೀನೂ ತಂದಿಟ್ಟ. ಊರಿನೋರಿಗೆಲ್ಲ ಇವಳ ಕಂಡ್ರೆ ಕನಿಕರ. ಪಾಪ, ಓಡಿಹೋದವಳ ನತದೃಷ್ಟ ಕೂಸು, ತಾಯಿ ಇದ್ದೂ ತಬ್ಬಲಿ ಅಂತ. ಇಂಥಾ ಮಗೂನ್ನ ಬಿಟ್ಟು ಓಡಿ ಹೋಗಿದಾಳಲ್ಲಾ ಎಂಥಾ ಹೆಂಗಸು. ಇವಳು ಬೆಳೆದ ಮೇಲೇನೋ ಅಪ್ಪ ಇವಳಿಗೆ ಮದುವೆ ಮಾಡೋಕೆ ಹರ ಸಾಹಸ ಮಾಡಿದ. ಉಹ್ಂ. ಪಾಪ ಇದರ ಹಣೇಲಿ ಬರೆದಿರಲಿಲ್ಲ. ಅಷ್ಟು ಸುಲಭಾನಾ ಅಂಥಾ ಹುಡುಗಿ ಮದುವೆ ಆಗೋದು... ಆಮೇಲೆ ಏನು ಮಾಡ್ತಾಳೆ ಟೀಚರ್ ಟ್ರೇನಿಂಗ್ ಮಾಡಿ ಕೆಲಸಕ್ಕೆ ಸೇರಿದಳು. ನೀನೇನು ಅಲ್ಪಸ್ವಲ್ಪ ಕಷ್ಟ ಪಟ್ಟದೀಯಾ... ನನ್ನನ್ನು ಕೇಳಿದ್ರೆ ಎಲ್ಲಾ ಹೇಳ್ತಿದ್ದೆ..." ಎಂದು ನಿಟ್ಟುಸಿರು ಬಿಟ್ಟು ನಡಗುತ್ತಿದ್ದ ತಮ್ಮ ಕೈಗಳತ್ತ ದಿಟ್ಟಿಸಿದರು.

ಮುಂದೆ ಬಂದದ್ದು ಮೌನ. ಯಾರೂ ಒಡೆಯಲಾಗದ ಮೌನ. ಕೊನೆಗೆ ಅದನ್ನು ಮುರಿದಿದ್ದು ನಿಧಾನವಾಗಿ ಎದ್ದು ಹೋದ ಸುನೀತಾ ಸೀರೆಯ ನಿರಿಗೆಗಳ ಸಣ್ಣ ಸರಭರ, ಹಿಂದೆಯೇ ಅವಳು ಬಾಗಿಲು ಬಡಿದ ಸದ್ದು.


ಮಾರನೆಯ ದಿನ ಎಂದಿನಂತೆ ಬೆಳಗಿನ ಜಾವ ಎದ್ದ ಸುಂದರಮ್ಮ ಮಾಡಿದ ಮೊದಲ ಕೆಲಸ ಬಚ್ಚಲುಮನೆಗೆ ಹೋಗಿ ಜಾಲರಿ ಕಿಟಕಿಯಿಂದ ಸುನೀತಾ ಮನೆಯೊಳಗೆ ನೋಡಿದ್ದು. ಅವರಿಗೊಂದು ಆಶ್ಚರ್ಯ ಕಾದಿತ್ತು. ಮೊದಲ ಬಾರಿಗೆ ಆ ರಾತ್ರಿ ಅವಳ ಮನೆಯ ದೀಪ ಆರಿತ್ತು... ಅವರಿಗೇಕೋ ಎದೆ ಝುಲ್ಲೆಂದಿತು. ಹೆದರೋದಕ್ಕೆ ಕಾರಣವಿಲ್ಲ ಎಂದು ಸಮಾಧಾನ ಮಾಡಿಕೊಂಡರು. ರಾತ್ರಿ ಬಲ್ಬ್ ಬರ್ನ್ ಆಗಿರಬೇಕು. ನಿದ್ದೆ ಹತ್ತಿ ಅವಳಿಗೆ ಗೊತ್ತಾಗಿರಲಾರದು ಎಂದುಕೊಂಡರು. ಆದರೆ ಹಿಂದೆಂದೂ ಹೀಗಾಗಿರಲಿಲ್ಲವಾದ್ದರಿಂದ, ತಮ್ಮ ಯೋಚನಾಸರಣಿಯಲ್ಲಿ ತಮಗೇ ನಂಬಿಕೆ ಇಲ್ಲದಿದ್ದರಿಂದ ಹೊಟ್ಟೆಯಲ್ಲೇನೋ ಸಂಕಟವೆನಿಸಿತು. ಹಲ್ಲುಜ್ಜಿ, ಕಾಫಿ ಮಾಡಿಕೊಂಡು ಕುಡಿದು ಸೂರ್ಯ ಅಷ್ಟು ಬೆಳಕು ಚೆಲ್ಲಲು ಕಾದರು. ಎಳೆ ಬಿಸಿಲು ಬಂದು ಅದು ಅವಳ ರೂಮಿನ ಕಿಟಕಿಯ ಮೂಲಕ ಒಳಗೆಲ್ಲಾ ಬೆಳಕು ಚೆಲ್ಲಿದಂತೆ ಮತ್ತೆ ಜಾಲರಿ ಕಿಟಕಿ ಹತ್ತಿರ ಹೋಗಿ ಮೆಟ್ಟಿಂಗಾಲು ಹಾಕಿ ನಿಂತರು. ಬಿಸಿಲಿಗೆ ಕಿರಿದಾದ ಕಣ್ಣುಗಳು ನಿಧಾನವಾಗಿ ತೆರೆದುಕೊಂಡು ಕಿಟಕಿಯ ಫ್ರೇಮಿನ ಚೌಕಟ್ಟಿನಲ್ಲಿ ಎಲ್ಲಾ ಸ್ಪಷ್ಟವಾಗಿ ಕಾಣತೊಡಗಿತು, ಸುನೀತಾ ಸೀಲಿಂಗ್ ಫ್ಯಾನಿನಿಂದ ನಿಶ್ಚಲವಾಗಿ ನೇತಾಡುತ್ತಿದ್ದಳು.

# ಮೈಸೂರು ಅಸೋಸಿಯೇಷನ್ ನಡೆದು ಬಂದ ದಾರಿ

✍ ಡಾ. ಬಿ. ಆರ್. ಮಂಜುನಾಥ್



ನಾವು ನಡೆದು ಬಂದ ದಾರಿಯಲ್ಲಿ ಏನೇನು ಹೆಜ್ಜೆ ಗುರುತುಗಳು ಅಳಿಯದೇ ಉಳಿದಿವೆ ಎಂದು ಹಿಂತಿರುಗಿ ನೋಡಿದಾಗ, ನಮಗೆ ಊರಿರುವ ಹೆಜ್ಜೆಗಳು ಯಾರು ಯಾರಿಗೆ ಸೇರಿದವು ಎನ್ನುವುದು ತಿಳಿದು ಸಂತಸವಾಗುತ್ತದೆ. ಮೊಟ್ಟಮೊದಲು ಕಾಣುವ ಎರಡು ಹೆಜ್ಜೆಗಳಲ್ಲಿ ಒಂದು ಶ್ರೀ ಚಂದ್ರಶೇಖರ ಶರ್ಮಾ ಅವರದ್ದು.



ಇವರು ಕನ್ನಡಕ್ಕಾಗಿಯೇ ಮನಸೋತು ಕೆಲಸ ಮಾಡಿದವರು. ಒಳ್ಳೆಯ ಬರಹಗಾರರಷ್ಟೇ ಅಲ್ಲ, ಒಂದು ಒಳ್ಳೆಯ ಸಾಮಾಜಿಕ ಕಾರ್ಯ ನಿರ್ವಾಹಕರು. ಅವರ ಮೊದಲ ಆಸೆ ಕನ್ನಡದ ಶಾಲೆಯೊಂದನ್ನು ಮುಂಬಯಿಯಲ್ಲಿದ್ದ ಕನ್ನಡಿಗರಿಗೆ ಮಾಡಬೇಕೆಂಬುದು. ಅದಕ್ಕಾಗಿ ಮುಂದೆ ನಿಂತು, ಒಂದು ಶಾಲೆಯನ್ನು ಮೊದಲು ಮಾಡಿದರು. ಮೈಸೂರು ಅಸೋಸಿಯೇಷನ್ ಮೊದಲು ಗಿರಿಗಾಂನಲ್ಲಿಯೇ ನಡೆದರೂ ಕೂಡ ಶಾಲೆ ಮಾತುಂಗಾದ ಬಾಡಿಗೆ ಮನೆಯೊಂದರಲ್ಲಿ ಪ್ರಾರಂಭವಾಯಿತು. 1927ರಲ್ಲಿ, ಒಬ್ಬ ಮಹಿಳಾ ಅಧ್ಯಾಪಕರನ್ನು, ರೂ. 16 ಮಾಸಿಕ ಸಂಬಳದಲ್ಲಿ ಗೊತ್ತು ಮಾಡಿದರು. ಆಂತೆಯೇ ಒಬ್ಬ ಆಳಿನ ಸಂಬಳ ರೂ. 8 ರಂತೆ. ಈ ಶಾಲೆಗೆ ತಾವು ಮೈಸೂರು ಅರಸರಿಂದ ಅನುದಾನ ತರುತ್ತೇವೆ ಎಂದು ನೆಚ್ಚಿಕೆಯನ್ನು ಇತ್ತ ಹಲವಾರು ವರ್ಷವಿಡೀ ಮೈಸೂರು ಸರ್ಕಾರವನ್ನು ಬಹಳ ಕಾಡಿದರೂ ಅದು ಕೈಗೂಡಲಿಲ್ಲ. ಏಕೆಂದರೆ ಟಿಪ್ಪುವನ್ನು ಕೊಂದ ಮೇಲೆ, ಬ್ರಿಟಿಷರು ಮೈಸೂರು ರಾಜರೊಡನೆ ಮಾಡಿಕೊಂಡ ಒಪ್ಪಂದದ ಪ್ರಕಾರ ಮೈಸೂರು ಸಂಸ್ಥಾನ ಹೊರನಾಡಿನಲ್ಲಿ ಯಾವ ಕನ್ನಡಿಗರ ಜೊತೆ ಯಾವ ವಿಧವಾದ ಸಂಬಂಧ ಇಟ್ಟುಕೊಳ್ಳಬಾರದು ಎಂದಾಗಿತ್ತು, ಹೀಗಾಗಿ ಮೈಸೂರು ಸಂಸ್ಥಾನ ಈ ಶಾಲೆಗೆ ಯಾವ ಅನುದಾನವನ್ನೂ ಕೊಡುವಂತಿರಲಿಲ್ಲ.



**ಎಚ್.ಕೆ. ಗಂಗಾಧರಯ್ಯ**
ಮೊದಲ ಕಲಾವಿದ (1929–30)

ಎರಡು ವರ್ಷ ಶಾಲೆ ನಡೆದ ಮೇಲೆ ಅಸೋಸಿಯೇಷನ್‌ನಲ್ಲಿ ಕಾಸೇ ಕಡಿಮೆಯಾಯಿತು. ಅಧ್ಯಾಪಕರಿಗೆ ಸಂಬಳ ಕೊಡಲು ಕಾಸೇ ಇಲ್ಲ. ಆಗ ಹಲವು ಸದಸ್ಯರು ನಾವೇ ಕಲಿಸುತ್ತೇವೆ ಎಂದು ಮುಂದೆ ಬಂದು ನಿಂತರು. ಆದರೇನು? ಈ ಸದಸ್ಯರೆಲ್ಲಾ ಸಂಬಳಕ್ಕಾಗಿ ಕೆಲಸ ಮಾಡುವವರೇ ಆಗಿದ್ದರು. ಆಗ ಕೆಲಸವೆಲ್ಲಾ ಕೋಟೆಯ ಹತ್ತಿರ ಇದ್ದು, ಇಲ್ಲಿ ಕಲಿಸುವುದಕ್ಕಾಗಿ ಮಾತುಂಗಾಗೇ ಬರುವುದು ಕಷ್ಟವಾಯಿತು. ಹೀಗಾಗಿ ಮೂರು ವರ್ಷಗಳ ಮೇಲೆ ಶಾಲೆ ನಿಂತಿತು.

ಶರ್ಮಾರವರ ಇನ್ನೊಂದು ಕನಸು, ಕನ್ನಡ ಪತ್ರಿಕೆ. ಅವರೇ ಮೊದಲು ಮಾಡಿ 4 ವರ್ಷಗಳ ಕಾಲ ನಡೆಸಿದ ಮಾಸ ಪತ್ರಿಕೆ. "ಪ್ರಬೋಧ". ಮುಂಬೈಯ ಮೊದಲ ಮಾಸಿಕ ಪತ್ರಿಕೆ. ಶರ್ಮಾರವರು ಮಾಡಿದ ಸಾಹಸಗಳಲ್ಲಿ ಇದೂ ಒಂದು. ಎಲ್ಲದಕ್ಕೂ ಹಣ ಬೇಕು. ಆಗ ಬಾಂಬೆ ಪ್ರೆಸಿಡೆನ್ಸಿ ಸರ್ಕಾರ ಎಲ್ಲದಕ್ಕೂ ನೆರವು ನೀಡುತ್ತಿರಲಿಲ್ಲ.


ಶ್ರೀ ಚಂದ್ರಶೇಖರ ಶರ್ಮಾ

ಆದರೆ ಆಗ ಚಂದ್ರಶೇಖರ ಶರ್ಮಾರವರು ಸಾಹಿತ್ಯಕ್ಕಾಗಿ ನೀಡಿದ ಒತ್ತು ಇಂದೂ ಅಸೋಸಿಯೇಷನ್‌ನಲ್ಲಿ ಕಾಣುತ್ತದೆ. ಹೀಗೆ ಶ್ರೀ ಚಂದ್ರಶೇಖರ ಶರ್ಮಾರವರ ಹೆಜ್ಜೆಯ ಗುರುತು ಅಳಿಯದೇ ಉಳಿದಿದೆ.

ಎರಡನೆಯ ಹೆಜ್ಜೆ ಇನ್ನೂ ಬಲವಾಗಿ ಊರಿರುವುದು ಕಾಣುತ್ತದೆ. ಇವರು ಒಬ್ಬರು ವಕೀಲರು. ರಂಗಭೂಮಿಯಲ್ಲಿ ಚಿಕ್ಕಂದಿನಿಂದ ತೊಡಗಿದವರು. ಶ್ರೀ ಗಂಗಾಧರಯ್ಯನವರು ಅಸೋಸಿಯೇಷನ್ನಿನ ಮೊಟ್ಟ ಮೊದಲ ಕಲಾವಿದರು. ಆಗ ಹೆಗ್ಗಳಿಕೆಯಾದ ಕಾಳಿದಾಸನ "ವಿರಾಟಪರ್ವ", "ಶಾಕುಂತಲ" ನಾಟಕಗಳನ್ನು ಕನ್ನಡದಲ್ಲಿ ಆಡಿಸಿ ಎಲ್ಲರ ಮನ ತಣಿಸಿದರು. ಅಂತೆಯೇ ಯಮುನಾಬಾಯಿ ನಾಯರ್ ಹಾಸ್ಪಿಟಲ್ ಕಟ್ಟುವುದಕ್ಕೆ ಸಹಾಯ ಮಾಡುವುದಕ್ಕಾಗಿ ಸಾರ್ವಜನಿಕವಾಗಿ ಪ್ರದರ್ಶನ ಮಾಡಿ ದುಡ್ಡು ಎತ್ತಿ ಆಸ್ಪತ್ರೆಗೆ ಕೊಟ್ಟರು. ಗಿರಿಗಾಂ ನಲ್ಲಿಯೇ ಯಾರ ಯಾರ ಮನೆಗಳಲ್ಲೇ ರಿಹರ್ಸಲ್ ಮಾಡುತ್ತಿದ್ದು, ಆಮೇಲೆ ಮಾತುಂಗಾದ ನಪ್ಪೂ ಹಾಲ್‌ನಲ್ಲಿ ಬಾಡಿಗೆಗಾಗಿ ಜಾಗ ಪಡೆದು ಅಲ್ಲಿಯೇ 7 ವರ್ಷಗಳ ಕಾಲ ಎಲ್ಲಾ ನಾಟಕಗಳನ್ನು ಆಡಿ ತೋರಿಸಿದರು.

ದಿವಾನ್ ಬಹಾದೂರ್ ರಾಮಸ್ವಾಮಿಯವರ ನೆರವಿನಿಂದ, ಮಾತುಂಗಾದ ಭಾವುದಾಜಿ ರಸ್ತೆಯಲ್ಲಿ ಒಂದು ಜಾಗ 1932ರಲ್ಲಿ ಸಿಕ್ಕಿ 1933 ರಲ್ಲಿ ವಾಣಿವಿಲಾಸ್ ಹಾಲ್ ಕಟ್ಟಿದಾಗ, ಗಂಗಾಧರಯ್ಯನವರಿಗಾದ ಸಂತಸ ಮಿಗಿಲಾದದ್ದು. ಈ ನಾಟಕದ ಹೆಜ್ಜೆಯ ಗುರುತು ಬಹಳ ಆಳಕ್ಕೆ ಇಳಿಯಿತು.


## ADVERTISEMENT

Are you a motivated and customer-focused individual looking for a challenging and rewarding career? Do you want to make a difference in people's lives by helping them secure their financial futures?




**Responsibilities:**

- Identify and develop new business opportunities
- Build and maintain strong relationships with clients
- Analyze clients' financial needs and provide personalized solutions
- Stay up-to-date with industry trends and product knowledge

**What We Offer:**

- Competitive compensation package
- Comprehensive training and development programs
- Opportunities for career advancement
- Recognition and rewards for outstanding performance

***For all details, please contact:***

**Shreekesh 9223410258**

# ಒಂದು ಮೌಲಿಕ ಉಪನ್ಯಾಸ : ರಾಮಾಯಣದಲ್ಲಿ ಮೌಲ್ಯ ಸಂಘರ್ಷ

– ಸವಿತಾ ಅರುಣ್ ಶೆಟ್ಟಿ

ತಾ. 25/02/2025ರಂದು ಮುಂಬೈ ವಿಶ್ವವಿದ್ಯಾಲಯ, ಕನ್ನಡ ವಿಭಾಗ ಮತ್ತು ಮೈಸೂರು ಅಸೋಸಿಯೇಷನ್, ಮುಂಬೈ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ 'ಬಂಗಾರದ ಹಬ್ಬ ದತ್ತಿ ಉಪನ್ಯಾಸ ಮಾಲಿಕೆ – 2025ರಲ್ಲಿ 'ರಾಮಾಯಣದಲ್ಲಿ ಮೌಲ್ಯ ಸಂಘರ್ಷ' ವಿಷಯದ ಕುರಿತು ಕಲಾವಿದರು ಮತ್ತು ವಿದ್ವಾಂಸರು ಆದ ಡಾ. ಪ್ರಭಾಕರ ಜೋಶಿ ಅವರ ಮಾತುಗಳಿಗೆ ಶ್ರೋತೃವಾಗುವ ಸದವಕಾಶವೊಂದು ನನ್ನದಾಯಿತು. ಅವರ ಮಾತು, ವಿಷಯ ಮಂಡನೆ ನಾವೆಲ್ಲ ನಿರೀಕ್ಷಿಸಿದಂತೆ ವಿದ್ವತ್ಪೂರ್ಣವಾಗಿತ್ತು ಅಲ್ಲದೆ ಸರಳವಾಗಿತ್ತು. ನಡುನಡುವೆ ದಿನ ಜೀವನದ ಆಗುಹೋಗುಗಳನ್ನು ಹೇಳುತ್ತಾ, ಲಘು ಹಾಸ್ಯ ಮಿಶ್ರಿತ ಮಾತುಗಳನ್ನು ಆಡುತ್ತಾ ಪ್ರೇಕ್ಷಕರನ್ನು ಹಿಡಿದಿಡುವ ಪರಿ ಹಿತವಾಗಿತ್ತು.

ಒಂದು ಜನಾಂಗದ ಸಂಸ್ಕೃತಿಯನ್ನು ಮಹಾಕಾವ್ಯಗಳು ಹೇಳುತ್ತವೆ ಅನ್ನುತ್ತಲೇ ರಾಮಾಯಣವು ಜನರ ಭಾವನೆಗಳನ್ನು ಹೇಗೆ ಹೇಳ್ತದೆ ಅನ್ನುವುದನ್ನು ಅವರು ರಾಮಾಯಣದಲ್ಲಿ ಬರುವ ಸನ್ನಿವೇಶಗಳನ್ನು ಉದಾಹರಿಸುತ್ತಾ ಹೋದರು. ಸಾವಿರಾರು ವರ್ಷಗಳ ಹಿಂದೆ ವಾಲ್ಮೀಕಿ ಇಂತಹದ್ದೊಂದು ಮಹಾಕಾವ್ಯ ರಚಿಸಿ ರಾಮನ ಪಾತ್ರದ ಸಂಘರ್ಷಗಳನ್ನು ಚಿತ್ರಿಸಿರುವುದು ಅಚ್ಚರಿಯನ್ನು ಉಂಟು ಮಾಡುವಂತಹದ್ದು. ರಾಮಾಯಣದಲ್ಲಿ ಅನೇಕ ಸಂಘರ್ಷದ ಸನ್ನಿವೇಶಗಳು ಬರ್ತವೆ ಅನ್ನುವುದನ್ನು ಉದಾಹರಣೆಗಳ ಮೂಲಕ ಹೇಳಿದ್ದು ರಾಮನ ಮತ್ತು ಇತರ ಪಾತ್ರಗಳ ನಡೆಯನ್ನು ಅರ್ಥೈಸಿಕೊಳ್ಳಲು ಸಹಾಯವಾಯಿತು. ನಡೆ ನುಡಿಗಳ ಮೂಲಕ ಮೌಲ್ಯಗಳನ್ನು ಹೇಗೆ ಎತ್ತಿ ಹಿಡಿಯಬಹುದು ಅನ್ನುವುದೂ ವಿದಿತವಾಯಿತು. ದಶರಥನಿಗೂ ಅಡಿಗಡಿಗೆ ಸವಾಲುಗಳನ್ನು ಎದುರಿಸಬೇಕಾಗಿ ಬಂತು; ಅವನ ಮೊದಲ ಸಂಘರ್ಷ – ಎಳೆ ಪ್ರಾಯದ ರಾಮ ಲಕ್ಷ್ಮಣರನ್ನು ವಿಶ್ವಾಮಿತ್ರನೊಂದಿಗೆ ಕಳುಹಿಸಬೇಕಾಗುವ ಸಂದರ್ಭ. ರಾಮನಿಗೆ ತಾಟಕಿ ವಧೆ ಮಾಡಬೇಕಾದಾಗ ಸ್ತ್ರೀ ದಾಕ್ಷಿಣ್ಯ. ಪರಶುರಾಮನ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಮತ್ತು ನಿಭಾಯಿಸಬೇಕಾಗುವ ಸಂದರ್ಭ, ಕಾಡಿಗೆ ಹೊರಡುವಾಗ ತಂದೆಯ, ಇತರರ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾದ ಸಂದರ್ಭ, ವಾಲಿ ಸುಗ್ರೀವರಲ್ಲಿ ಯಾರನ್ನು ಆಧರಿಸಬೇಕು, ವಿಭೀಷಣನ ಸ್ನೇಹವನ್ನು ಹೇಗೆ ಸ್ವೀಕರಿಸಬೇಕು ಇತ್ಯಾದಿ ಇತ್ಯಾದಿ.

ರಾಮನಿಗೆ ಬಲಶಾಲಿಗಳಾದ ಮಿತ್ರರು ಬೇಕಿರಲಿಲ್ಲ, ಆತನಿಗೆ ಮೌಲ್ಯವನ್ನು ಅರಿತ ಮಿತ್ರರು ಬೇಕಾಗಿತ್ತು. ಸುಗ್ರೀವ, ವಿಭೀಷಣ, ಹನುಮಂತ ಇವರ ಸ್ನೇಹವನ್ನು ಒಪ್ಪುವ ರಾಮನಿಗೆ ತನ್ನ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಸಂಘರ್ಷಗಳು ಎದುರಾದವು ಮತ್ತು ಒಬ್ಬ ಕ್ಷತ್ರಿಯನಾಗಿ, ರಾಜನ ಮಗನಾಗಿ, ಭರತ ಲಕ್ಷ್ಮಣರಿಗೆ ಅಣ್ಣನಾಗಿ, ಸೀತೆಯ ಪತಿಯಾಗಿ, ಪ್ರಜೆಗಳ ಅನುರಾಗಿಯಾಗಿ ತಾನು ನಂಬಿದ ಮೌಲ್ಯಗಳನ್ನು ಹೇಗೆ ಪೋಷಿಸುತ್ತಾ ನಡೆದ; ಪಾಲಿಸಿದ ಎಂಬುದನ್ನು ದೃಷ್ಟಾಂತಗಳ ಜೊತೆಗೆ ಕೊಟ್ಟ ವಿವರಣೆ, ವಿಶ್ಲೇಷಣೆ ಸ್ವಾರಸ್ಯಪೂರ್ಣವಾಗಿತ್ತು.

ರಾಮನಿಗೆ, ಆತನ ಜೀವನದ ಪ್ರತಿ ಹಂತದಲ್ಲೂ ಸವಾಲುಗಳೇ ಸವಾಲುಗಳು. ಆದರೆ ಆತ ದೃಢಚಿತ್ತನು. ತನ್ನ ಮಾತಿಗೆ, ತನ್ನ ನಿಲುವಿಗೆ ಬದ್ಧನಾಗಿ ನಿಂತವನು. ಅರಮನೆಯ ರಾಜಕೀಯವನ್ನಾಗಲೀ ಕೌಟುಂಬಿಕ ರಾಜಕೀಯವನ್ನಾಗಿ ಅರಿತು, ಅರ್ಥೈಸಿಕೊಂಡು ಅದಕ್ಕೆ ಸರಿಯಾಗಿ ತನ್ನ ನಡೆಯನ್ನು ನಿರ್ಧರಿಸಿಕೊಂಡವನು. ಎಂಬಿತ್ಯಾದಿ ವಿಷಯಗಳ ಮೇಲೆ ಬೆಳಕು ಚೆಲ್ಲಿರುವುದು ರಾಮಾಯಣದ ಮರು ಓದಿಗೆ ಪ್ರೇರೇಪಿಸಿದಂತಾಗಿದೆ.

ಯುಗಧರ್ಮವನ್ನು, ಕಾಲಧರ್ಮವನ್ನು ಮೌಲ್ಯಗಳನ್ನು ಕಾವ್ಯದ ಮೂಲಕ ಹೇಳಬೇಕು ಎಂಬ ಮಹಾಕವಿಯ ಆಕಾಂಕ್ಷೆ ಕಾಣುತ್ತದೆ ಎಂಬ ಉಪನ್ಯಾಸಕಾರರ ಮಾತು ಉಲ್ಲೇಖನೀಯ.

ಕಾರ್ಯಕ್ರಮದ ಆರಂಭದಲ್ಲಿ ನಡೆದ 'ಮುಂಬೈ ಯಕ್ಷಗಾನ ರಂಗಭೂಮಿ ಪರಂಪರೆ ಮತ್ತು ಸವಾಲುಗಳು' ಸಂವಾದ ಗೋಷ್ಠಿಯಲ್ಲಿ ಪಾಲ್ಗೊಂಡ ಎಲ್ಲ ಹಿರಿಯ ಕಲಾವಿದರ ಮಾತು ಸೊಗಸಾಗಿತ್ತು. ಅಂದಿನ ಕಾರ್ಯಕ್ರಮಗಳ ಆಯೋಜಕರಿಗೂ, ವಿದ್ವಾಂಸರಿಗೂ ಅನಂತ ವಂದನೆಗಳು.

# "ಸೈಬರ್ ವಂಚನೆ – ಅಂತರ್ಜಾಲದ ಕರಾಳ ಮುಖ" – ಕೃತಿ ಬಿಡುಗಡೆ
# "ಮನೆಮನೆಗೆ ತಂತ್ರಜ್ಞಾನ ತಲುಪಬೇಕು: ಡಾ॥ ಗಣಪತಿ ಶಂಕರಲಿಂಗ"

"ಇತ್ತೀಚಿನ ದಿನಗಳಲ್ಲಿ ಅಂತರ್ಜಾಲ ವಂಚನೆಯ ಹಾವಳಿ ಮಿತಿ ಮೀರಿದೆ. ದರೋಡೆಕೋರರು ಸಾಮಾಜಿಕ ಜಾಲತಾಣಗಳನ್ನು ಬಳಸಿ ಜನರ ದುಡ್ಡು ದೋಚುವ ಹೊಸ ಹೊಸ ಉಪಾಯಗಳನ್ನು ಮಾಡುತ್ತಿದ್ದಾರೆ. ಅಂತಹ ಮೋಸಗಳನ್ನು ಕುರಿತು ಜನರನ್ನು ಎಚ್ಚರಿಸುವ ಸಲುವಾಗಿ ವಿಕ್ರಮ್ ಜೋಶಿ ಅವರು ಸರಳವಾದ ಭಾಷೆಯಲ್ಲಿ ಒಂದು ಉತ್ತಮವಾದ ಕೃತಿಯನ್ನು ರಚಿಸಿದ್ದಾರೆ. ತಂತ್ರಜ್ಞಾನ ವಿಷಯದ ಬಗ್ಗೆ ಬರೆದಿರುವ ಈ ಕೃತಿ ಎಲ್ಲ ಕನ್ನಡಿಗರಲ್ಲಿ ಇರಲೇಬೇಕಾದ ಪುಸ್ತಕ. ಮನೆ ಮನೆಗೆ ತಂತ್ರಜ್ಞಾನ ತಲುಪಬೇಕು" ಎಂದು ಮೈಸೂರು ಅಸೋಸಿಯೇಷನ್ ಗೌರವ ಕಾರ್ಯದರ್ಶಿ ಡಾ॥ ಗಣಪತಿ ಶಂಕರಲಿಂಗ ಅಭಿಪ್ರಾಯಪಟ್ಟರು. ಅವರು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗ ಮತ್ತು ಮೈಸೂರು ಅಸೋಸಿಯೇಷನ್ ಮುಂಬೈ – ಇವರ ಸಂಯುಕ್ತ ಆಶ್ರಯದಲ್ಲಿ ಅಂಕಣಕಾರ ಹಾಗೂ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ವಿದ್ಯಾರ್ಥಿ ವಿಕ್ರಮ್ ಜೋಶಿ ಅವರ ಎಂ.ಎ. ಶೋಧ ಸಂಪ್ರಬಂಧ "ಸೈಬರ್ ವಂಚನೆ – ಅಂತರ್ಜಾಲದ ಕರಾಳ ಮುಖ" ಕೃತಿಯನ್ನು ಜ. 25ರಂದು ಮೈಸೂರು ಅಸೋಸಿಯೇಷನ್ ಸಭಾಂಗಣದಲ್ಲಿ ಲೋಕಾರ್ಪಣೆಗೊಳಿಸಿ

ಮಾತನಾಡಿದರು. ಮೊಬೈಲ್ ಅನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬಹುದು ಎಂಬ ವಿಷಯದ ಕುರಿತು ಪುಸ್ತಕ ಬರಲಿ ಎಂದು ಅವರು ಈ ಸಂದರ್ಭದಲ್ಲಿ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಪ್ರೊ ಜಿ. ಎನ್. ಉಪಾಧ್ಯ ಅವರು ಮಾತನಾಡಿ, ವಿಕ್ರಮ್ ಜೋಶಿ ಅವರು ವಿಜ್ಞಾನದ ಹಿನ್ನೆಲೆಯಿಂದ ಬಂದ ಲೇಖಕ. ಅಂಕಣಕಾರರಾಗಿ, ಲೇಖಕರಾಗಿ ಅವರು ಈಗಾಗಲೇ ಹೆಸರು ಮಾಡಿದವರು.




ತಂತ್ರಜ್ಞಾನದ ಕ್ಷೇತ್ರದಲ್ಲಿ ಕೆಲಸ ಮಾಡುತ್ತ ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ತಳೆದಿರುವ ಜೋಶಿ ಅವರು ನಿರಂತರ ಓದು ಬರವಣಿಗೆಯಲ್ಲಿ ತೊಡಗಿಸಿ ಕೊಂಡಿದ್ದಾರೆ. ಅವರ ಕೃತಿ ಈಗಾಗಲೇ ಕರ್ನಾಟಕ ದಲ್ಲಿ ಜನಪ್ರಿಯವಾಗಿದೆ. ಸಾಹಿತ್ಯ ವಲಯವಾಗಿ ಹೆಸರು ಮಾಡಿರುವ ಮುಂಬೈಯಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರೂ ಲೇಖಕರಾಗಿ ಬೆಳೆಯುತ್ತಿರುವುದು ಅಭಿಮಾನದ ಸಂಗತಿ. ವಿಕ್ರಮ್ ಜೋಶಿ ಅವರ ಮುಂದಿನ ಯೋಜನೆಗಳು ಸಫಲವಾಗಲಿ ಎಂದು ಶುಭ ಹಾರೈಸಿದರು.

ಮುಂಬೈ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಸಂಶೋಧನ ವಿದ್ಯಾರ್ಥಿನಿ ಕಲಾ ಭಾಗ್ವತ್ ಅವರು, ಅಂತರ್ಜಾಲದ ವಿಕೃತ ಕರಾಳಗಳಿಗೆ, ಆಧುನಿಕ ಚೋರತನಗಳಿಗೆ ಹೇಗೆ ಬುದ್ಧಿ ಕಲಿಸಬೇಕು ಎನ್ನುವಂತಹ, ಬೇರೆ ಬೇರೆ ವಂಚನೆಗಳನ್ನು ತಪ್ಪಿಸುವ ಸುಲಭೋಪಾಯಗಳನ್ನು ಹೇಳುವ, ಜಾಗೃತಿ ಮೂಡಿಸುವ, ಪ್ರಸ್ತುತದಲ್ಲಿ ಅವಶ್ಯವಾದ ಕೃತಿ ಇದಾಗಿದೆ ಎಂದು ಕೃತಿಯನ್ನು ಪರಿಚಯಿಸಿದರು.

ಕೃತಿಕಾರರಾದ ವಿಕ್ರಮ್ ಜೋಶಿ ಅವರು ಮಾತನಾಡಿ, ನಮ್ಮ ದೇಶದಲ್ಲಿ ಪ್ರತಿ ತಾಸಿನಲ್ಲಿ ಆಗುವ 50 ಸೈಬರ್ ವಂಚನೆ ಗಳಲ್ಲಿ ಕೇವಲ ಧನಹಾನಿ ಅಲ್ಲದೆ, ಮಾನಹಾನಿಯೂ ಆಗುತ್ತದೆ. ಪ್ರಚಲಿತ ವಿದ್ಯಮಾನಗಳು, ತಂತ್ರಜ್ಞಾನ, ಸಾಹಿತ್ಯ ಈ ಮೂರರ ಬೆರಕೆಯಾಗಿರುವ ಈ ಕೃತಿಯಲ್ಲಿ ಸಮಾಜದಲ್ಲಿ ಆಗುವ ವಂಚನೆಗಳ ಕುರಿತ ಎಚ್ಚರಿಕೆಯ ಲೇಖನಗಳಿವೆ. ಪ್ರತಿಯೊಂದಕ್ಕೂ ಅದರದ್ದೇ ಆದ ಸಂಶೋಧನೆ, ಹಿನ್ನೆಲೆ, ಪರಿಹಾರಗಳಿವೆ. ಜನಸಾಮಾನ್ಯರಿಗೂ ಅರಿವಾಗುವಂತೆ ಸರಳವಾಗಿ ಕನ್ನಡ ಭಾಷೆಯಲ್ಲಿ ಬರೆಯಲು ಪ್ರಯತ್ನಿಸಿದ್ದೇನೆ ಎಂದರು. ಮಾರ್ಗದರ್ಶನ ನೀಡಿ ಕೃತಿ ರಚನೆಗೆ ಪ್ರೋತ್ಸಾಹಿಸಿದ ಪ್ರೊ ಜಿ ಎನ್ ಉಪಾಧ್ಯ ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

ಅವರು ಮಾರ್ಗದರ್ಶಕರಾದ ಪ್ರೊ ಜಿ. ಎನ್. ಉಪಾಧ್ಯ, ಗಣಪತಿ ಶಂಕರಲಿಂಗ ಸಹ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿ, ಕಲಾ ಭಾಗ್ವತ್ ಅವರನ್ನು ಗೌರವಿಸಿದರು. ಕಾರ್ಯಕ್ರಮವನ್ನು ಡಾ. ಪೂರ್ಣಿಮಾ ಶೆಟ್ಟಿ ಅವರು ಸಂಯೋಜಿಸಿದ್ದರು.

# ಮನಸೆಳೆದ ಕೃಷ್ಣ ಸಂಧಾನ

ಕರಾವಳಿ ಕರ್ನಾಟಕದ ಮನೋಹರವಾದ ಕಲಾಪ್ರಕಾರ ಒಂದನ್ನು ನೇರವಾಗಿ ನೋಡಿ ಆಸ್ವಾದಿಸುವ ಸದವಕಾಶವು ಕಳೆದ 26/01/2025ರ ಭಾನುವಾರದಂದು ಒದಗಿ ಬಂದಿತು. ಮೈಸೂರು ಅಸೋಸಿಯೇಷನ್, ಮಾತುಂಗ ಮತ್ತು ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯಗಳ ಸಂಯುಕ್ತ ಆಶ್ರಯದಲ್ಲಿ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬ 2025ರ ಅಂಗವಾಗಿ ನಡೆದ ಕೃಷ್ಣ ಸಂಧಾನವೆಂಬ ತಾಳಮದ್ದಳೆಯ ಪ್ರಸಂಗವದು. ಅರ್ಥದಾರಿಗಳಾಗಿ ಕೃಷ್ಣನ ಭೂಮಿಕೆಯನ್ನು ಡಾ. ಎಂ ಪ್ರಭಾಕರ್ ಜೋಶಿಯವರು ಮತ್ತು ಕೌರವನ ಭೂಮಿಕೆಯನ್ನು ಶ್ರೀ ಪ್ರಕಾಶ್ ಪಣಿಯೂರವರು ನಿರ್ವಹಿಸಿದರು. ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟರ ಸಿರಿಕಂಠದಲ್ಲಿ ಭಾಗವತಿಕೆ ನೆರವೇರಿತು. ಚೆಂಡೆಯಲ್ಲಿ ಪ್ರವೀಣ ಶೆಟ್ಟಿ ಎಕ್ಕಾರು ಮತ್ತು ಮದ್ದಳೆಯಲ್ಲಿ ಮಧುಸೂದನ್ ಪಾಲನ್ ಅವರು ಉತ್ತಮವಾಗಿ ಸಹಕರಿಸಿದರು.

ಉತ್ತರ ಕರ್ನಾಟಕದ ಕಲಬುರ್ಗಿಯಲ್ಲಿ ಹುಟ್ಟಿ ಬೆಳೆದ ನಾನು ಕರಾವಳಿ ಕರ್ನಾಟಕದ ಈ ಕಲಾಪ್ರಭೇದಗಳ ಹೆಸರುಗಳನ್ನು ಕೇಳಿ ತಿಳಿದಿದ್ದೇನೇ ಹೊರತು ಪ್ರತ್ಯಕ್ಷವಾಗಿ ನೋಡಿ ಅವುಗಳ ಸೊಬಗನ್ನು ಆಸ್ವಾದಿಸಿರಲಿಲ್ಲ. ಭಾನುವಾರದ ಕಾರ್ಯಕ್ರಮವು ನನಗೆ ಹೊಸ ಜಗತ್ತೊಂದನ್ನು ಪರಿಚಯಿಸಿತು. ಯಾವ ಹೆಚ್ಚಿನ ರಂಗ ಸಜ್ಜಿಕೆಯಿಲ್ಲದೆ, ವೇಷಭೂಷಣಗಳ ಅಬ್ಬರವಿಲ್ಲದೆ, ಇಬ್ಬರೇ ಪಾತ್ರಧಾರಿಗಳ ನಡುವೆ ನಡೆದ ಈ ಕೃಷ್ಣ ಸಂಧಾನದ ಪ್ರಕರಣವು ಪ್ರೇಕ್ಷಕರನ್ನು ನಿಜಕ್ಕೂ ದ್ವಾಪರಯುಗದ ಹಸ್ತಿನಾವತಿಯ ಕುರುಸಭೆಗೆ ಕರೆದೊಯ್ದಿತೆಂದರೆ ಅದರ ಶಕ್ತಿ ಪ್ರಭಾವಗಳ ಅಂದಾಜಾದೀತು.

ಇಂತಹ ಕಾರ್ಯಕ್ರಮಗಳ ಯಶಸ್ಸಿನ ಶ್ರೇಯಸ್ಸು ಮೊದಲಿಗೆ ಸಲ್ಲಬೇಕಾದದ್ದು ನಮ್ಮ ಮಹಾಭಾರತದ ಕಥೆಗೆ. ಚಿಕ್ಕಂದಿನಿಂದಲೂ ಅದನ್ನು ಕೇಳುತ್ತಲೇ ಬೆಳೆದು, ವಿಧವಿಧವಾದ ಮಾಧ್ಯಮಗಳಲ್ಲಿ ಇಂದಿಗೂ ಅದಕ್ಕೆ ಮತ್ತೆ ಮತ್ತೆ ಮುಖಾಮುಖಿಯಾಗುತ್ತಿದ್ದು ಅದರ ಉಪಕಥೆಗಳನ್ನೆಲ್ಲ ವಿಶದವಾಗಿ ತಿಳಿದಿದ್ದರೂ ಕೂಡ ಭಾನುವಾರದ ಕೃಷ್ಣ ಸಂಧಾನದ ಪ್ರಸಂಗವು ಒಂದು ಹೊಚ್ಚಹೊಸ ಪ್ರಸ್ತುತಿಯೇನೋ ಎಂಬ ಭಾವವನ್ನು ಪ್ರೇಕ್ಷಕರಲ್ಲಿ ಹುಟ್ಟಿಸಿದ ಈ ಮಹಾಕಾವ್ಯದ ಮಹಿಮೆ ವರ್ಣನಾತೀತ. ಭಾರತೀಯರ ಭಾವಕೋಶಗಳಲ್ಲಿ ಈ ಮಹತ್ ಕೃತಿಗೆ ಅಂತಹ ಆತ್ಮೀಯ ಸ್ಥಾನವಿದೆ.

ಭಾನುವಾರದ ಕಾರ್ಯಕ್ರಮದ ವೈಶಿಷ್ಟ್ಯವೆಂದರೆ ಅದು ಮೂರು ತಾಸುಗಳವರೆಗೆ ನಡೆಯಿತೆಂದು ಕೇಳುತ್ತಿದ್ದವರಿಗೆ ಅನ್ನಿಸಲೇ ಇಲ್ಲ. ಮಂಗಳವನ್ನು ಹಾಡಿದಾಗ ಇಷ್ಟು ಸಮಯವಾಯಿತೇ ಎನ್ನುವ ಅಪನಂಬಿಕೆಯಿಂದ ಮತ್ತೆ ಮತ್ತೆ ಕೈಗಡಿಯಾರವನ್ನು ನೋಡಿಕೊಳ್ಳುವಂತಾಯಿತು. ಆ ಮಟ್ಟದ ಸಮ್ಮೋಹಕ ಶಕ್ತಿಯು ಅಂದಿನ ಪ್ರಸಂಗಕ್ಕಿತ್ತು.

ದುರ್ಯೋಧನನಾಗಿ ಪ್ರಕಾಶ್ ಪಣಿಯೂರರು ಆ ಹಿಂದೆ ನಡೆದ ದೂರ್ವಾಸಾತಿಥ್ಯ, ದ್ರೌಪದಿ ವಸ್ತ್ರಾಪಹರಣ, ಚಿತ್ರಸೇನ ಗಂಧರ್ವನ ಪ್ರಸಂಗಗಳನ್ನು ಅತ್ಯಂತ ಸಂಯಮದಿಂದ ನಿರರ್ಗಳವಾಗಿ ಬಿಚ್ಚಿಡುತ್ತಾ ಹೋದರು. ಕೌರವನ ದೃಷ್ಟಿಯಿಂದ ಇವುಗಳನ್ನು ಖಚಿತವಾಗಿ ವಿವರಿಸುತ್ತಿರುವಾಗ ದುರ್ಯೋಧನನ ನಡವಳಿಕೆಗಳು ಸರಿಯಾಗಿಯೇ ಇದ್ದುವಲ್ಲ ಎನ್ನುವ ಸಮ್ಮತಿಯೇ ಮನಸ್ಸನ್ನು ಆವರಿಸಿಕೊಳ್ಳುತ್ತಿತ್ತು. ನಂತರದಲ್ಲಿ ಕೃಷ್ಣನ ಪಾತ್ರದ ಪ್ರಭಾಕರ ಜೋಶಿಯವರು ಅವುಗಳನ್ನು ಅಷ್ಟೇ ಸಂಯಮದಿಂದ ಖಂಡಿಸುವಾಗ ಹೌದಲ್ಲವೇ ಎಂಬಂತಾಗುತ್ತಿತ್ತು. ಅಸ್ಖಲಿತವಾದ, ದೋಷರಹಿತವಾದ, ಸರಳವಾದ, ಸುಂದರವಾದ ಭಾಷಾಸ್ರೋತವನ್ನು ಇಬ್ಬರಿಂದಲೂ ಕೇಳುವಾಗ ಮೈ ನವಿರೇಳುತ್ತಿತ್ತು. ಎಷ್ಟೆಲ್ಲ ವಿವರವಾದ ಸಂಭಾಷಣೆಗಳನ್ನು ಎಲ್ಲಿಯೂ ಕಲಸಿಕೊಳ್ಳದಿರುವಂತೆ ಎಳೆಎಳೆಯಾಗಿ ಇಬ್ಬರೂ ಅರ್ಥಧಾರಿಗಳು ಮಂಡಿಸಿದರು. ಪುನರಾವರ್ತನೆಯ ಹೊರೆಯೇ ಇರಲಿಲ್ಲ. ಕೃಷ್ಣನ ಪಾತ್ರಕ್ಕೆ ಸಲ್ಲುವಂತೆ ಜೋಶಿಯವರು ಸಂಭಾಷಣೆಯ ಮಧ್ಯದಲ್ಲಿ ಉಚ್ಚರಿಸುತ್ತಿದ್ದ ಸಂಸ್ಕೃತದ ಶ್ಲೋಕಗಳು ಮತ್ತು ಉಪನಿಷದ್ವಾಕ್ಯಗಳು ಬಹಳ ಒಪ್ಪುವಂತಿದ್ದವು.

ಸಂಗ್ರಾಮವಲ್ಲದೆ ಶಾಂತಿಯೇ ತನಗೆ ಬೇಕೆಂದಿದ್ದರೆ ಅದನ್ನು ಆಗಗೊಳಿಸುವುದು ಕೃಷ್ಣನ ಕೈಯಲ್ಲಿರಲಿಲ್ಲವೇ ಎನ್ನುವ ಪ್ರಶ್ನೆಯನ್ನು ಬಹಳ ಉಚಿತವಾದ ರೀತಿಯಲ್ಲಿ ಕೌರವನು ಬಾರಿ ಬಾರಿಯೂ ಬೇರೆ ಬೇರೆ ವಿಧಗಳಲ್ಲಿ ಕೇಳುತ್ತಾ ಯುದ್ಧವೇ ಕೃಷ್ಣನ ಮುಖ್ಯ ಇಂಗಿತ ಎನ್ನುವುದನ್ನು ಹೊರಗೆಡವಿದಾಗ ಇದಕ್ಕೆ ಕೃಷ್ಣನು ಯಾವ ಸಮರ್ಥನೆಯನ್ನು ಕೊಟ್ಟಿಯಾನೆನ್ನುವ ಕುತೂಹಲವು ಸಭಿಕರ ಮನಸ್ಸುಗಳಲ್ಲಿ ಮೂಡುತ್ತಿದ್ದಂತೆಯೇ ಪ್ರಭಾಕರ ಜೋಶಿಯವರು ಸಮ್ಮತದ ಹಾವಭಾವ ಮಿತಾಭಿನಯಗಳಿಂದ ಆ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ನೀಡುತ್ತಿದ್ದುದು ಬಹಳ ಮನೋಹರವಾಗಿತ್ತು.

ದುರ್ಯೋಧನನು ತನ್ನ ಹಠವನ್ನೇ ಕಡೆಯವರೆಗೂ ಸಾಧಿಸಿದರೂ ಪಂಚಭೂತಗಳಲ್ಲಿ ಸಕಲಜೀವರೂ ಲೀನವಾಗಿಹೋಗುವ ಅಂತಿಮಸತ್ಯವನ್ನು ಬಹಳ ಸರಳವಾದ ವಾಕ್ಯಗಳಲ್ಲಿ ಮನಮುಟ್ಟುವಂತೆ ಹೇಳಿ ಕೊನೆಗೆ ತಾನು ವಿರೋಧಭಕ್ತಿಯ ಮಾರ್ಗವಾಗಿ ಕೃಷ್ಣನ ಪದತಲವನ್ನೇ ಸೇರುವವನೆಂದಾಗ ಅವನ ಖಳನಾಯಕತ್ವವು ಕರಗಿಹೋಗಿ ಸಭಿಕರ ಕಣ್ಣಂಚುಗಳು ತೇವವಾಗುವಂತಾಯಿತು.

ದೇವಿದಾಸ ಕವಿಯ 'ಕೃಷ್ಣ ಸಂಧಾನ' ಪ್ರಸಂಗದಿಂದ ಆಯ್ದ ಪದ್ಯಗಳನ್ನು ಪೊಲ್ಯರು ನಡುನಡುವೆ ಹಾಡುತ್ತಿದ್ದರೆ ಸೊಗಸಾದ ಶಾವಿಗೆಯ ಪಾಯಸದಲ್ಲಿ ಹದವಾಗಿ ತುಪ್ಪದಲ್ಲಿ ಹುರಿದ ದ್ರಾಕ್ಷಿ ಗೋಡಂಬಿಗಳು ಮಧ್ಯ ಮಧ್ಯ ಬಾಯಿಗೆ ಸಿಕ್ಕಿ ಸವಿಯಾಗುವಂತೆ ಆಗುತ್ತಿತ್ತು. ಪೊಲ್ಯರದು ಅದ್ಭುತವಾದ ಸಿರಿ ಕಂಠ. ಅವರ ಭಾಗವತಿಕೆ ಮತ್ತು ಇತರರ ಸಂಭಾಷಣೆಗಳು ಸಮೀಕರಣಗೊಂಡು ಏಕಭಾವದಿಂದ ಪ್ರಕಟವಾದಾಗ ಅದೆಷ್ಟು ಬಾರಿ ರಂಗ ತಾಲೀಮನ್ನು ನಡೆಸಿ ಈ ಪ್ರಸ್ತುತಿಯನ್ನು ನೀಡುತ್ತಿರುವರೊ ಎಂದೆನ್ನಿಸುತ್ತಿತ್ತು. ಆದರೆ ಅರ್ಥಧಾರಿಗಳಿಬ್ಬರೂ ಭೇಟಿಯಾದದ್ದೇ ಅಂದಿನ ಮುಂಜಾನೆ ಎಂದು ತಿಳಿದಾಗ ಉಂಟಾದ ಬೆರಗಿಗೆ ಪಾರವೇ ಇಲ್ಲ.

ಈ ಕಾರ್ಯಕ್ರಮದಿಂದ ತಿಳಿದು ಬಂದ ಇನ್ನೊಂದು ಸತ್ಯವೆಂದರೆ ಯಕ್ಷಗಾನ ಕವಿಗಳು ತಮ್ಮ ಅಮೂಲ್ಯವಾದ ಬರವಣಿಗೆಗಳಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತ ಗೊಳಿಸಿರುವರೆಂಬುದು. ಆದರೆ ಅವರಿಗೆ ಸಲ್ಲಬೇಕಾದಷ್ಟು ಮನ್ನಣೆ ಸಂದಿಲ್ಲವೆಂಬ ವಿಷಾದವೂ ಉಂಟಾಯಿತು.

ಕುಮಾರವ್ಯಾಸನ ನಾಂದಿಪದ್ಯದಿಂದ ಕಾರ್ಯಕ್ರಮವು ಪ್ರಾರಂಭವಾದಾಗ ನಿಜಕ್ಕೂ ಕಲಿಯುಗ ದ್ವಾಪರವಾಯಿತು. ಪ್ರಸಂಗದ ಆರಂಭಕ್ಕೆ ಮುನ್ನ ಕಲಾವಿದರು ಪರಸ್ಪರರನ್ನು ಭಕ್ತಿಗೌರವಗಳಿಂದ ಅಭಿವಾದಿಸಿಕೊಂಡು ಪಕ್ಕ ವಾದ್ಯಗಳಿಗೂ ನಮಸ್ಕರಿಸಿದಾಗ ಮನರಂಜನೆಯ ಕಲೆಯು ಕೂಡ ಭಗವದುಪಾಸನೆಯ ಒಂದು ಮಾರ್ಗವೇ ಎನ್ನುವ ನಮ್ಮ ಹಿರಿಯರ ಸಂಸ್ಕಾರದ ಔನ್ನತ್ಯವನ್ನು ಮನಗಂಡು ಗೌರವದಿಂದ ತಲೆಬಾಗುವಂತಾಯಿತು. ಇನ್ನು ಮುಂದೆ ಮುಂಬಯಿಯಲ್ಲಿ ನಡೆವ ತಾಳಮದ್ದಳೆಗಳಿಗೆ ಗೈರುಹಾಜರಾಗುವುದು ಸಾಧ್ಯವೇ ಇಲ್ಲವೆನ್ನುವ ನಿರ್ಧಾರವನ್ನು ಮನಸ್ಸಿನಲ್ಲಿ ಈ ಪ್ರಸಂಗವು ಮೂಡಿಸಿದೆಯೆಂಬಲ್ಲಿ ಅದರ ಯಶಸ್ಸು ಸ್ವಯಂವೇದ್ಯ.

ಈ ಕಾರ್ಯಕ್ರಮವನ್ನು ಆಗಗೊಳಿಸಿದ ಎಲ್ಲರಿಗೂ ಹೃತ್ಪೂರ್ವಕವಾದ ಅಭಿನಂದನೆಗಳು.

# ಸಂದರ್ಶನ – ಶ್ರೀಮತಿ ಶ್ಯಾಮಲಾ ಮಾಧವ

ಕಳೆದ ಸಂಚಿಕೆಯಿಂದ ಮುಂದುವರಿದ ಭಾಗ....

20. ಉಳ್ಳಾಲ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ತಮ್ಮ ಅನುಭವ?

ಉಳ್ಳಾಲ ತಾಲೂಕು ಪ್ರಥಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಕರೆ ಬಂದಾಗ ನಾನು ಹಿಂಜರಿದಿದ್ದೆ. ನನ್ನ ಸರ್ವಸ್ವವಾಗಿದ್ದ ನನ್ನ ಕಂದನನ್ನು ಕಳಕೊಂಡು ಅಷ್ಟು ಬೇಗನೇ ಅಂತಹ ಘನ ವೇದಿಕೆಯನ್ನು ಏರುವುದು ನನ್ನಿಂದ ಅಸಾಧ್ಯವೆಂದೇ ಹೇಳಿದೆ. ನನ್ನನ್ನು ಆ ಸ್ಥಿತಿಯಿಂದ ಹೊರತರಬೇಕೆನ್ನುವ ಪ್ರಿಯ ಜೀವಗಳ ಒತ್ತಾಸೆ, ತಾಲೂಕು ಸಾಹಿತ್ಯ ಪರಿಷತ್ತಿನ ಡಾ. ಧನಂಜಯ ಕುಂಬ್ಳೆ ಅವರ ಆಗ್ರಹ, ಅನುನಯಕ್ಕೆ ನಾನು ಕೊನೆಗೂ ಮಣಿಯಲೇ ಬೇಕಾಯಿತು. ನನ್ನೂರು ನನ್ನನ್ನು ಗುರುತಿಸಿ, ದೂರದ ಮುಂಬೈಯಿಂದ ಕರೆಸಿಕೊಳ್ಳುತ್ತಿರುವ ವಿಚಾರಕ್ಕೆ ಹೃದಯ ತುಂಬಿ ಬಂತು. ಸಾಮರಸ್ಯಕ್ಕಾಗಿ ಸಾಹಿತ್ಯ ಎಂಬ ಸಮ್ಮೇಳನದ ಆಶಯ ವಾಕ್ಯ ಬಹಳ ಪ್ರಿಯವೆನಿಸಿ, ಪ್ರೀತಿಯಿಂದ ಅಧ್ಯಕ್ಷ ಭಾಷಣದ ತಯಾರಿಯಲ್ಲಿ ತೊಡಗಿದೆ. ತತ್ಸಂಬಂಧ ತೊಡಗಿದ ಓದು, ಅಧ್ಯಯನ ತುಂಬಾ ತೃಪ್ತಿಯನ್ನೇ ನೀಡಿತು. ಹಿರಿಯರಾದ ಡಾ. ಸುನೀತಾ ಶೆಟ್ಟಿ, ಡಾ. ಜಿ. ಎನ್. ಉಪಾಧ್ಯ, ಎಸ್.ಜಿ. ಸೀತಾರಾಮ್, ಮೈಸೂರು ಅವರ ಪ್ರೋತ್ಸಾಹ ಮಾರ್ಗದರ್ಶನವಿತ್ತಿತು.

ನನಗೆ ಅತ್ಯಂತ ಪ್ರಿಯವಾದ ಸಾಮರಸ್ಯದ ಬಗೆಗೆ ನನ್ನ ಮನದ ಮಾತುಗಳನ್ನು ನನ್ನ ಪ್ರಿಯ ಜನರ ಮುಂದಿಡುವ ಅವಕಾಶ ನನಗೆ ತುಂಬಾ ಸಂತೋಷವನ್ನಿತ್ತಿತ್ತು. ನಮ್ಮ ನಾಡಿನಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿಯನ್ನು, ಸಾಹಿತ್ಯ ಸಾಧನೆಯಲ್ಲಿ ನನಗೆ ದಾರಿದೀಪವಾದ ಗುರುಹಿರಿಯರನ್ನು, ನಾಡಿನ ಸಾಹಿತಿ ಶ್ರೇಷ್ಠರನ್ನು, ನನ್ನೂರ ಪ್ರಿಯಜನರನ್ನು, ಬಾಳಲ್ಲಿ ಬೆಳಕು ತೋರಿದ ಪುಸ್ತಕಗಳನ್ನು ಸ್ಮರಿಸಿಕೊಳ್ಳುವ ಭಾಗ್ಯ ನನ್ನದಾಯಿತು. ನನ್ನ ಕರಾವಳಿ ಲೇಖಕಿಯರ ಸಂಘದ ಗೆಳತಿಯರು, ಪ್ರಿಯ ಬಂಧುಗಳು, ಇಷ್ಟಮಿತ್ರರು ಜೊತೆಗಿದ್ದ ಸಂತಸದೊಡನೆ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ವಿದ್ಯಾಮಂದಿರದ ಮಂಗಳಾ ಆಡಿಟೋರಿಯಂ ನಲ್ಲಿ ನಡೆದ ಸಮ್ಮೇಳನ ನನ್ನ ಪಾಲಿಗೆ ಸ್ಮರಣೀಯವಾಯ್ತು.

21. ಮುಂಬಯಿಯಲ್ಲಿ ನಿಮ್ಮ ಸಾಹಿತ್ಯ ಸೇವೆಗೆ ಪ್ರೋತ್ಸಾಹ ಹೇಗಿತ್ತು?

ಪ್ರೋತ್ಸಾಹಿಸಿದ ಹಿರಿಯ ಸಾಹಿತಿಗಳಾದ ಬಲ್ಲಾಳರು, ಚಿತ್ತಾಲರು, ಸನದಿ, ತಾಳ್ತಜೆ, ಜಿ. ಎನ್. ಉಪಾಧ್ಯ, ಡಾ. ನಿಂಜೂರ್, ಜಯಂತ್ ಕಾಯ್ಕಿಣಿ ಅಂಥವರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಕರ್ನಾಟಕ ಸಂಘ, ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗ, ಮುಂಬೈ ಕನ್ನಡ ಸಂಘ, ಮೈಸೂರ್ ಅಸೋಸಿಯೇಶನ್, ಮತ್ತು ಗೋರೆಗಾಂವ್ ಕರ್ನಾಟಕ ಸಂಘಗಳು ಸಾಹಿತ್ಯ ಕಾರ್ಯಕ್ರಮಗಳಿಗೆ ಸದಾ ಆಶ್ರಯವಿತ್ತು, ಗುರುತಿಸಿ ಪ್ರೋತ್ಸಾಹಿಸಿವೆ. ಸೃಜನಾ ಬಳಗದ ಗೆಳತಿಯರೆಲ್ಲರ, ನನ್ನ ಕೃತಿಗಳನ್ನು ಓದಿ ಮೆಚ್ಚಿ ಪ್ರೀತಿಯಿಂದ ವಿಶ್ಲೇಷಿಸುವ ದಯಾಸಾಗರ್ ಚೌಟರಂತಹ ಸಹೃದಯಿಗಳ, ಗೋಪಾಲ್ ತ್ರಾಸಿ, ಸಾ. ದಯಾ, ಮೋಹನ್ ಮಾರ್ನಾಡ್, ರಾಜೀವ್ ನಾಯಕ್, ಕಲಾ ಭಾಗ್ವತ್, ನಳಿನಿ ಪ್ರಸಾದ್ ರಂತಹ ಮಿತ್ರವೃಂದದ, ಪತ್ರಕರ್ತರಾದ ಪ್ರಿಯ ರೋನ್ಸ್ ಬಂಟ್ವಾಳ್, ದಿನೇಶ್ ಶೆಟ್ಟಿ ರೆಂಜಾಳ, ಶ್ರೀನಿವಾಸ ಜೋಕಟ್ಟೆ ಅಂತಹವರ ಸ್ನೇಹಸಿಂಚನ ಹೃದಯಕ್ಕೆ ತಂಪೆರೆದು ಪ್ರೋತ್ಸಾಹದಾಯಿನಿಯಾಗಿದೆ.

22. ಲೇಖಕಿಯಾಗಿ, ಅನುವಾದಕಿಯಾಗಿ, ಅಂಕಣಗಾರ್ತಿಯಾಗಿ ಸಾಹಿತ್ಯ ಸೇವೆ ಮಾಡಿದ್ದೀರಿ. ನಿಮ್ಮ ನೆಚ್ಚಿನ ಕ್ಷೇತ್ರ ಯಾವುದು?

ಲೇಖನ, ಅನುವಾದ ಎರಡೂ ನನ್ನ ಮೆಚ್ಚಿನ ಕ್ಷೇತ್ರಗಳೇ ಆಗಿವೆ. ಕಂಡು ಕೇಳಿದ್ದನ್ನು ನನ್ನ ಪ್ರೀತಿ, ಗೌರವಕ್ಕೆ ಪಾತ್ರರಾದವರನ್ನು, ಪ್ರಕೃತಿ, ಪರಿಸರ, ಸಮಾಜ, ನಾಡು, ನುಡಿ, ಓದಿ ಮೆಚ್ಚಿದ ಕೃತಿಗಳ ಬಗ್ಗೆ ನನಗೆ ಹೇಳಲಿರುವುದನ್ನು ನನ್ನ ಸ್ಮೃತಿ ಸಂಚಯವನ್ನು ಅಕ್ಷರ ರೂಪಕ್ಕೆ ಇಳಿಸಿ ಲೇಖನಗಳಾಗಿ ಓದುಗರಿಗೆ ತಲುಪಿಸುವುದು ನನ್ನ ಮೆಚ್ಚಿನ ಹವ್ಯಾಸ. ಹಾಗೆಯೇ ನಾನು ಓದಿ ಮೆಚ್ಚಿ ಅಂತರಂಗದಲ್ಲಿ ಸ್ಥಾಯಿಯಾಗಿಸಿಕೊಂಡ ಪರಭಾಷಾ ಕೃತಿಗಳನ್ನು ನಮ್ಮ ಚೆಲುಕನ್ನಡ ನುಡಿಯಲ್ಲಿ ಪಡಿಮೂಡಿಸಿ, ಮೂಲಕ್ಕೆ ಕಿಂಚಿತ್ತೂ ಅನ್ಯಾಯವಾಗದಂತೆ ಅದರ ಸಾರಸರ್ವಸ್ವವನ್ನು ಪುಸ್ತಕವಾಗಿಸಿ ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿವುದೇ ನನ್ನ ಧ್ಯೇಯ ಹಾಗೂ ಪರಮ ಪ್ರಿಯ ಕಾಯಕ. ಇದರಲ್ಲಿ ನನಗೆಂದೂ ದಣಿವೆಂಬುದಿಲ್ಲ. ನನ್ನ ಮೆಚ್ಚಿನ ವಿಶ್ವಸಾಹಿತ್ಯ ಕೃತಿಗಳೆಲ್ಲವನ್ನೂ ಕನ್ನಡಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ನೀಡುವ ಹಂಬಲ ಅಪಾರ.

23. ಆಕಾಶವಾಣಿಯಲ್ಲಿ ನಿಮ್ಮ ಸಂದರ್ಶನದ ಅನುಭವ ಹೇಗಿತ್ತು?

ಆಕಾಶವಾಣಿ 'ಚಂದನ' ದ ಸಂದರ್ಶನದ ಅನುಭವ ತುಂಬಾ ಚೆನ್ನಾಗಿತ್ತು. ಎಚ್. ಎನ್. ಆರತಿಯವರನ್ನು ಭೇಟಿಯಾದ ಸಂತೋಷ ಈಗಲೂ ಮನದಲ್ಲಿ ಹಸಿರಾಗಿದೆ. ಸಂದರ್ಶಕ ವೃಷಭೇಂದ್ರ ಸ್ವಾಮಿ ಅವರ ಭೇಟಿ, ಅವರು ಕೇಳಿದ ಪ್ರಶ್ನೆಗಳು, ಅತ್ಯಂತ ಸಹಜವಾಗಿ, ನೇರವಾಗಿ, ಸರಳವಾಗಿ ಅವರು ಕೇಳಿದ ಪ್ರಶ್ನೆಗಳು ನನ್ನನ್ನೇ ನಾನು ಸಹಜವಾಗಿ ತೆರೆದುಕೊಳ್ಳುವಂತೆ, ಮನದ ಮಾತುಗಳನ್ನಾಡುವಂತೆ ಮಾಡಿದವು. ನನ್ನ ಚಿತ್ತಭಿತ್ತಿಯಲ್ಲಿ ಸದಾ ಹಸಿರಾಗಿರುವ ಸಿಹಿ ಅನುಭವವದು.

24. ನಿಮ್ಮ ಮಗನ ಅಗಲುವಿಕೆಯ ಕುರಿತು ಬರೆದ ' ತುಷಾರ ಹಾರ' ಒಡಲ ನೋವಿನ ಕಥನ ಬರೆಯುವಲ್ಲಿ, ಮನದ ತಲ್ಲಣಗಳಿಗೆ ರೂಪ ಕೊಡಬೇಕೆಂಬ ಅನಿಸಿಕೆಗಳಿಗೆ ಕಾರಣವೇನಾದರೂ ಇದೆಯೇ?

ಹಿಮಾಚಲ, ಅರುಣಾಚಲ, ಮೇಘಾಲಯ, ಉತ್ತರಾಖಂಡ, ಪಶ್ಚಿಮ ಘಟ್ಟ ಪ್ರದೇಶಗಳಲ್ಲೆಲ್ಲ ಏಕಾಂಗಿಯಾಗಿಯೂ,

ಗೆಳೆಯರೊಡನೆಯೂ ಚಾರಣ ಮಾಡಿ ಅಸಂಖ್ಯ ಅದ್ಭುತ ಫೋಟೋಗಳೊಂದಿಗೆ ಮರಳುತ್ತಿದ್ದವ! ತನ್ನ Instructional Design Field ನಲ್ಲಿ ಹೆಸರುವಾಸಿಯಾಗಿ ಹಲವಾರು ಎಳೆ ಪ್ರತಿಭೆಗಳಿಗೆ ಮಾರ್ಗದರ್ಶಿಯಾದ ತುಷಾರ್ ನಿಗೆ ಗೆಳೆತನವೇ ಎಲ್ಲಕ್ಕಿಂತ ದೊಡ್ಡ ನಿಧಿಯಾಗಿತ್ತು. ಸ್ವಾತಂತ್ರ್ಯವೇ ಧರ್ಮವಾಗಿತ್ತು. ಐ.ಟಿ. ಕಂಪೆನಿಯೊಂದರ ಮುಖ್ಯಸ್ಥನಾಗಿದ್ದರೂ ಹಳೆಯ ಹತ್ತಿ ಬಟ್ಟೆಗಳನ್ನೇ ತೊಡುತ್ತಿದ್ದವ. ಎಂದೂ ತನ್ನ ಬಗ್ಗೆ ಎಲ್ಲೂ ಹೇಳಿಕೊಳ್ಳದೆ ಉಳಿದವ! ಅಂಥಾ ಅನಿರೀಕ್ಷಿತ ಅಸೌಖ್ಯದಲ್ಲೂ ಮೌನವಾಗಿ ತಾಳಿಕೊಂಡಿದ್ದ ನನ್ನ ಕಂದ! ಅಂಥಾ ಮರೆಯಲ್ಲೇ ಉಳಿದ ನನ್ನ ಕಂದನ ಬಗೆಗೆ ಲೋಕಕ್ಕೆ ತಿಳಿಸುವ, ಹಾಗೂ ಆ ವಿವರಗಳು ಯಾರಿಗಾದರೂ ದಾರಿ ತೋರಬಹುದು ಎನ್ನುವ ವಿಚಾರದಿಂದಲೇ ನಾನು ರೂಪಿಸಿದ ಕೃತಿ, "ತುಷಾರ ಹಾರ".

ಅದನ್ನು ಓದಿದ ಅನೇಕರು, ನಾನು ಆ ದಾರುಣ ದಿನಗಳನ್ನು ನನ್ನ ಡೈರಿಯಲ್ಲಿ ಕಾಪಿಟ್ಟಿದ್ದೇನೆ, ಎಂದುಕೊಂಡಿದ್ದಾರೆ. ಇಲ್ಲ, ಆದರೆ ಎಲ್ಲವೂ - ರೋಗ ಪತ್ತೆಯಾದೊಡನೆ ಶ್ರೀಮತಿ ನೇಮಿಚಂದ್ರರಿಗೆ ಬರೆದ ಪತ್ರದಿಂದ ತೊಡಗಿ ಕೊನೆಯ ಕ್ಷಣದವರೆಗೂ ನಡೆದ ಎಲ್ಲಾ ವಿವರವೂ ನನ್ನ ಮೊಬೈಲ್ ನಲ್ಲಿ ಉಳಿದಿತ್ತು ಹಾಗಾಗಿ, ಎಲ್ಲವನ್ನೂ ದಿನಾಂಕ ಸಹಿತ ಬರೆಯುವುದು ಸಾಧ್ಯವಾಯಿತು.

ಹಿಂದುಜಾದಲ್ಲಿ ನಡೆದ ಕಂದನ ಎಲ್ಲ ಟೆಸ್ಟ್ ಗಳ, ರಿಪೋರ್ಟ್ ಗಳ, ಅಮೆರಿಕಾದ ರೋಶ್ ಸಂಸ್ಥೆಗೆ ಕಳುಹಿದ ಜಿನೋಮ್ ಟೆಸ್ಟ್ ನ ವರದಿಯ, ಆಂಕಾಲಜಿಸ್ಟ್ ಡಾ. ಸಚಿನ್ ಹಾಗೂ ನಂತರ ನಮ್ಮ ಪಾಲಿಗೆ ಬಂದ ಪ್ಯಾಲಿಯೇಟಿವ್ ಕೇರ್ ಡಾಕ್ಟರ್ ಜಯರಾಜನ್ ಅವರೊಡನೆ ನಡೆದ ದಿನವಹಿ ಸಂವಹನಗಳು, ಹೃದಯ ಹಿಂಡುವ ಫೋಟೋಗಳು ಎಲ್ಲವೂ ನನ್ನ ಮೊಬೈಲ್ ನಲ್ಲಿ ಉಳಿದುಕೊಂಡಿವೆ.

"ನಾನು ಅವರ ಬದುಕಿನ ಭಾಗವಾಗಿದ್ದೆ, ಎಂಬುದೇ ನನಗೆ ಬಹುದೊಡ್ಡ ಖುಶಿ; ಈ ಭಾಗ್ಯವನ್ನು ಪಡೆದಿಲ್ಲದ ಜನರು ನಿಜಕ್ಕೂ ನತದೃಷ್ಟರು", ಎಂದ ಆಪ್ತಮಿತ್ರರೊಬ್ಬರು;

"ಬದುಕಿದರೆ ಹೀಗೆ ಬದುಕಬೇಕು, ಎಂಬಷ್ಟು ಅರ್ಥಪೂರ್ಣವಾಗಿ ಬದುಕಿದರು, ತುಷಾರ್. ಅಚ್ಚರಿಯ ಗಣಿಯಂತಿದ್ದ ತನ್ನ ಕಂದನ ಖಾಸಗಿತನಕ್ಕೆ ಚೂರೂ ಧಕ್ಕೆಯಾಗದಂತೆ ಅವರ ಸವಾಲಿನ ದಿನಗಳ ಹಾಡು ಪಾಡುಗಳನ್ನು ಶ್ಯಾಮಲಾ ಇಲ್ಲಿ ಘನತೆಯಿಂದ ದಾಖಲಿಸಿದ್ದಾರೆ", ಎಂದು ಮುನ್ನುಡಿ ಬರೆದ ಪ್ರಸಾದ್ ನಾಯ್ಕ್.

"ಬದುಕುಳಿದವರು ಕತೆಗಳನ್ನು ನಾನು ಬರೆದಿದ್ದರೆ ತುಷಾರ್ ನಂತೆ ಸತ್ತೂ ಬದುಕಿದವರ ಕತೆಯನ್ನು ಶ್ಯಾಮಲಾ ಬರೆದಿದ್ದಾರೆ .... ಕ್ಯಾನ್ಸರಿನ ಝಳಕ್ಕೆ ಹಿಮದ ಹನಿಯಾಗಿ ಕರಗಿ ಹೋದ ಮುದ್ದು ತುಷಾರ್! ...ಸಾವಿನ ಆಚೆಗೂ ಕೈಚಾಚಿ ತನ್ನ ಕಂದಮ್ಮನನ್ನು ಅವಚಿಕೊಂಡ ಪರಿಯಿದು!" ಎಂದು ನನ್ನ ತುಷಾರ್ ಭಾರಕ್ಕೆ ಬೆನ್ನುಡಿ ಬರೆದವರು, ಈ ಚಿಕಿತ್ಸಾ ಪಯಣದ ಎಂಟು ತಿಂಗಳುಗಳುದ್ದಕ್ಕೂ ಜೊತೆ ನೀಡಿದ ಗೆಳತಿ ನೇಮಿಚಂದ್ರ ಅವರು.

ಅಪೂರ್ವ ನಿಧಿಯಾಗಿ ನನ್ನ ಬಾಳಲ್ಲಿ ಬಂದು, ಹಲವು ಜೀವಗಳನ್ನು ಬೆಳಗಿಸಿ, ನನ್ನ ಉಸಿರಲ್ಲಿ ಒಂದಾಗಿ ಉಳಿದು ಹೋದ ನನ್ನ ಕಂದನ ಬಗೆಗೆ ಬರೆದು ಅವನನ್ನು ನನ್ನಕ್ಷರಗಳಲ್ಲಿ ಉಳಿಸುವುದಷ್ಟೇ ನನ್ನ ಪಾಲಿಗೆ ಉಳಿದಿತ್ತು. ಹಾಗೆ ರೂಪುಗೊಂಡಿದ್ದು, ನನ್ನ "ತುಷಾರ ಹಾರ" ಎಸ್.ಜಿ. ಸೀತಾರಾಮ್ ಅವರು ಅಂದಂತೆ, ಹೆಮ್ಮೆಯಿಂದ, ಮೆಚ್ಚುಗೆಯಿಂದ, ಅಕ್ಕರೆಯಿಂದ ನನ್ನ ಕೂಸಿಗೆ ನಾನು ಸಲಿಸಿದ ನುಡಿ ಹೂಗೊಂಚಲು, ಈ ತುಷಾರ ಹಾರ.

25. "ನಾಳೆ ಇನ್ನೂ ಕಾದಿದೆ" ಆತ್ಮ ಕಥನ ಬರೆಯಲು ಪ್ರೇರಣೆ ಏನೆಂದು ತಿಳಿಯಬಹುದೇ?

"ನಾಳೆ ಇನ್ನೂ ಕಾದಿದೆ", ಅಶೋಕ ವರ್ಧನರ ಅತ್ರಿ ಬ್ಲಾಗ್ ನಲ್ಲಿ ಒಂದೂವರೆ ವರ್ಷ ಧಾರಾವಾಹಿಯಾಗಿ ಹರಿದ ನನ್ನ ಆತ್ಮಕಥಾನಕ ಅಂಕಣ. ನಮ್ಮ ಹಿರಿಯ ಪರಂಪರೆಯ ಬಗ್ಗೆ, ನನ್ನೂರು, ನಮ್ಮಜ್ಜಿಮನೆ, ಅಲ್ಲಿನ ನಮ್ಮ ಕೂಡುಕುಟುಂಬ, ನಮ್ಮ ಬಾಲ್ಯ, ಬಂಧುವರ್ಗ ಎಲ್ಲದರ ಬಗ್ಗೆ ಕಾದಂಬರಿಯೊಂದನ್ನು ರಚಿಸುವಂತೆ ನಮ್ಮಣ್ಣ ಮೋಹನ್ ಸೂಚಿಸಿದ್ದರು. ಹಾಗೆ ನಾನು ಐದು ಅಧ್ಯಾಯಗಳನ್ನು ಬರೆದಿದ್ದಾಗ, ನನ್ನ ನೆನಪುಗಳ ತುಣುಕುಗಳನ್ನು ಅಲ್ಲಲ್ಲಿ ನನ್ನ ಬರಹದಲ್ಲಿ ಕಂಡಿದ್ದ ಅಶೋಕ ವರ್ಧನರು, ಅವರ ಬ್ಲಾಗ್ ಗೆ ಅಂಕಣ ಬರಹವಾಗಿ ಬರೆದು ಕೊಡುವಂತೆ ಕೇಳಿದರು. ಮತ್ತೆ ಕಾದಂಬರಿ ಮುಂದುವರಿಸುವುದು ಕಷ್ಟಸಾಧ್ಯವೆನಿಸಿ ಬದಲಾಗಿ ಆತ್ಮಕಥನಕ್ಕೇ ನಾನು ಶರಣಾದೆ.

ನನ್ನ ತಾಯ್ತಂದೆ, ಪ್ರಿಯ ಬಂಧುಗಳು, ಗುರುಹಿರಿಯರು, ನನ್ನನ್ನು ಪ್ರಭಾವಿಸಿದ ಶ್ರೇಷ್ಠ ವ್ಯಕ್ತಿಗಳು, ಪುಸ್ತಕಗಳು, ಪ್ರಕೃತಿ, ಪರಿಸರ, ನನ್ನನ್ನು ಕಾಡುವ ವಿಚಾರಗಳೆಲ್ಲವನ್ನೂ ನನ್ನ ಓದುಗರ ಮುಂದಿಡಲು ನಾನು ಆಯ್ದುಕೊಂಡುದು ಈ ಕಥನ ಮಾರ್ಗ. ಬಾಲ್ಯದಲ್ಲೂ, ಬೆಳೆದಂತೆಯೂ ಓದಿದ ಆತ್ಮಕಥನಗಳು ನನಗೆ ಬಹುಪ್ರಿಯವಾಗಿದ್ದು, ನನ್ನೊಳಗನ್ನೂ, ನನ್ನ ಬದುಕನ್ನೂ ಅಕ್ಷರಗಳಲ್ಲಿ ರೂಪಿಸಲು ಪ್ರೇರಣೆ ನೀಡಿದ್ದೂ ಹೌದು.

26. "ಪುಸ್ತಕ ಅವಲೋಕನ" ಓದುಗರ, ವಿಮರ್ಶಕರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಓದುವ ಅಭಿರುಚಿ ಇರುವವರಿಗೆ ನಾನು ಹೇಳಬೇಕಾದ್ದೇನೂ ಇಲ್ಲ. Books are our best friends ಎಂಬುದನ್ನೇ ನಂಬಿದವಳು ನಾನು. ವಿಶ್ವ ಸಾಹಿತ್ಯ ಕೃತಿಗಳ ಓದು ನಿಜಕ್ಕೂ ನಮ್ಮ ಅರಿವಿನ ಭಂಡಾರವನ್ನು ವಿಸ್ತರಿಸುವಂಥದು. ಸಿ. ಕೆ. ವೆಂಕಟರಾಮಯ್ಯನವರು ಕಾಳಿದಾಸ ಮಹಾಕವಿ ಉದ್ಗ್ರಂಥವನ್ನು ಓದುವಂತೆ ಸೂಚಿಸಿದವರು, ನನ್ನ ವಾತ್ಸಲ್ಯ ಗುರು ತೆಕ್ಕುಂಜೆ ಗೋಪಾಲಕೃಷ್ಣ ಭಟ್ ಅವರು. ಬರೆದುದೆಲ್ಲವೂ ಸುಂದರವಾಗಿರುವಂತೆ ನೋಡಿಕೋ ಎಂದೂ ಹಾರೈಸಿದವರು. ಕಾಳಿದಾಸ ಮಹಾಕವಿ ಉದ್ಗ್ರಂಥ ಭಾಷೆಯ ಸೌಂದರ್ಯದ ಮಟ್ಟಿಗೆ ನನ್ನನ್ನು ಬಹಳಷ್ಟು ಪ್ರೇರೇಪಿಸಿದೆ, ಎನ್ನಬೇಕು. ಪುಸ್ತಕ ಅವಲೋಕನದ ಓದುಗರಿಗೆ ಹಲವು ಕೃತಿಗಳನ್ನು ಪರಿಚಯಿಸಿ, ಅವರ ಸಾಹಿತ್ಯಾಸಕ್ತಿ ವೃದ್ಧಿಸುವಂತಹ ಶ್ರೇಷ್ಠ ಕಾರ್ಯದಲ್ಲಿ ತೊಡಗಿರುವ ವೀಣಾ ನಾಯಕ್ ಅವರನ್ನು ಎಷ್ಟು ಹೊಗಳಿದರೂ ಕಡಿಮೆ. ವಿಮರ್ಶಕರಿಗೆ ನಾನು ಹೇಳುವುದೇನೂ ಇಲ್ಲ. ಸಾಹಿತ್ಯದಲ್ಲಿ ಹೃದಯದ ಭಾಷೆಯೇ ಮುಖ್ಯ ಎನ್ನುವವಳು ನಾನು.

ನನ್ನೆಲ್ಲಾ ಬರವಣಿಗೆಯೂ ಪ್ರೀತಿಯಿಂದ ಕೈಕೊಂಡ ಕಾಯಕ. ಸಾಹಿತ್ಯ ಅಕಾಡೆಮಿ, ಅನುವಾದ ಅಕಾಡೆಮಿಗಳು ನಮ್ಮ ಪರಿಶ್ರಮಕ್ಕೆ ತಕ್ಕ ಸಂಭಾವನೆ ಕೊಡುತ್ತವೆ ಎಂಬುದನ್ನಷ್ಟೇ ನವ ಸಾಹಿತಿಗಳಿಗೆ ತಿಳಿಸ ಬಯಸುವೆ. ಭಾಷಾ ಸೌಂದರ್ಯ, ಶುದ್ಧತೆಯ ಜೊತೆಗೆ ಬರಹ ಮನಮುಟ್ಟುವಂತೆ ಇರಬೇಕು. ಓದುಗರೊಡನೆ ಸಂವಹನ ಸಾಧ್ಯವಾಗುವಂತೆ ಇರಬೇಕು. ಹಿತವನ್ನು ಸಾಧಿಸುವುದೇ ಸಾಹಿತ್ಯ ಎಂಬ ಅರಿವು ಇರಬೇಕು.

27. ಅನುವಾದದ ಕಡೆಗೆ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುವತ್ತ ಹೆಜ್ಜೆ ಹಾಕುವ ಸಾಹಿತ್ಯಾಸಕ್ತರು ಗಮನಿಸಬೇಕಾದ ಅಂಶಗಳೇನು? ಮೂಲ ಲೇಖಕರ ಅನುಮತಿ ಪಡೆಯುವ ಬಗ್ಗೆ ಹೇಳಬಹುದೇ?

ಅನುವಾದವು ಯಾವಾಗಲೂ ಮೂಲಕೃತಿಗೆ ಸಂಪೂರ್ಣ ಬದ್ಧವಾಗಿರಬೇಕು. ಮೂಲಕೃತಿಯನ್ನು ನಮ್ಮದಾಗಿಸಿಕೊಂಡು ಅದನ್ನು ನಮ್ಮ ನುಡಿಯಲ್ಲಿ ಪರಿವರ್ತಿಸಿ ಅದರ ಎಲ್ಲ ಸೌಂದರ್ಯ, ಶ್ರೇಷ್ಠತೆಯೊಂದಿಗೆ ನಮ್ಮ ಓದುಗರಿಗೆ ನೀಡುವ ಸಾರ್ಥಕತೆ ನಮ್ಮದಾಗಬೇಕು.

ಮೂಲ ಲೇಖಕರು ಇಲ್ಲವೇ ಅವರಿಲ್ಲವಾದರೆ ಕೃತಿಯ ಹಕ್ಕುದಾರರ ಒಪ್ಪಿಗೆ ಪಡೆಯುವುದು ಅವಶ್ಯ. ಕೃತಿಕಾರರ ದೇಹಾಂತ್ಯವಾಗಿ ಐವತ್ತು ವರ್ಷಗಳಾಗಿದ್ದರೆ ಅನುಮತಿ ಪಡೆಯಬೇಕಾಗಿಲ್ಲ.

ಮೂಲ ಲೇಖಕರ ಇಲ್ಲವೇ ಕೃತಿಸ್ವಾಮ್ಯದ ಹಕ್ಕುದಾರರ ಅನುಮತಿಗಾಗಿ ಈ ಮೈಲ್, ಪತ್ರವ್ಯವಹಾರ ನಡೆಸಿ ಉತ್ತರ ಪಡೆಯುವುದು ಸೂಕ್ತ. ಮಹತ್ವದ ಬೃಹತ್ ಕೃತಿಗಳ ಸಂದರ್ಭದಲ್ಲಿ ಪ್ರಕಾಶಕರ ಮುಖಾಂತರ ಅನುಮತಿ ಪಡೆಯುವುದು ಉತ್ತಮ.

28. ಇತ್ತೀಚೆಗೆ ರಚನೆಯಾದ ಪಂಚ ದ್ರಾವಿಡ ಭಾಷಾ ಅನುವಾದಕರ ಸಂಘ ಕೇವಲ ದ್ರಾವಿಡ ಭಾಷೆಗಳಿಗೆ ಮಾತ್ರ ಸೀಮಿತವೇ?

ಹೌದು. ಕನ್ನಡ, ಮಲೆಯಾಳ, ತಮಿಳು, ತೆಲುಗು, ತುಳು ಈ ಪಂಚ ದ್ರಾವಿಡ ಭಾಷೆಗಳನ್ನೊಳಗೊಂಡ ಈ ಸಂಘದ ಸ್ಥಾಪಕರು ಬೆಂಗಳೂರಿನ ಸುಷ್ಮಾ ಶಂಕರ್ ಎಂದು ತಿಳಿಯಿತು. ಪರಭಾಷೆಯಿಂದ ನೇರ ಅನುವಾದ ಮಾಡುವವರ ಸಂಘವಿದು.

29. ಪ್ರಸ್ತುತ ಯಾವುದಾದರೂ ಕೃತಿಯ ಅನುವಾದದಲ್ಲಿ ತೊಡಗಿಸಿಕೊಂಡಿರುವಿರೇ?

ಹೌದು. ಇಂಗ್ಲಿಷ್ ಲೇಖಕಿ ಎಮ್. ಎಮ್. ಕೇಯಿ ವಿರಚಿತ 'The Far Pavilions' ಕೃತಿಯನ್ನು ನಾನು ಅನುವಾದಿಸ ತೊಡಗಿದ್ದು ಇಪ್ಪತ್ತಾರು ವರ್ಷಗಳ ಹಿಂದೆ, ಓದಿದ ಕೂಡಲೇ. ನಮ್ಮಕ್ಕ ಗಾಡ್ರೇಜ್ ಸ್ಕೂಲ್ ಲೈಬ್ರೆರಿಯಿಂದ ತಂದಿತ್ತ ಬೃಹತ್ ಪುಸ್ತಕ. ಆರಂಭದ ಅಧ್ಯಾಯವೇ ರೋಚಕವೆನಿಸಿ, ಕನ್ನಡದಲ್ಲಿ ಪಡಿಮೂಡಿಸುವ ಉತ್ಕಟ ಆಕಾಂಕ್ಷೆಯಿಂದ ಆರಂಭಿಸಿದ ಅನುವಾದವದು. ಆದರೆ ಗಾನ್ ವಿತ್ ದ ವಿಂಡ್, ದೀರ್ಘವೆಂಬ ಕಾರಣಕ್ಕೆ ಬೆಳಕು ಕಾಣದಾದಾಗ, ನನ್ನ ಆಕಾಂಕ್ಷೆಗೆ ಕಡಿವಾಣ ಹಾಕಬೇಕಾಯಿತು. ಗಾನ್ ವಿತ್ ದ ವಿಂಡ್ ನಂತೆಯೇ ಇದರ ಅನುವಾದದ ಅಧ್ಯಾಯಗಳನ್ನೂ ತಂದೆಯವರಿಗೆ ಕಳುಹುತ್ತಿದ್ದೆ. ತಂದೆ ಮಾತ್ರವಲ್ಲ, ತಾಯಿಯೂ ಅನುವಾದ ತುಂಬಾ ಚೆನ್ನಾಗಿದೆ, ಬೇಬಿ, ಎಂದು ಪ್ರೋತ್ಸಾಹಿಸಿದ್ದರು. ಆದರೂ, ಅದು ಪ್ರಕಟವಾಗುವುದೇ ಎಂಬ ಆತಂಕದಿಂದ ಅಲ್ಲಿಗೇ ನಿಲ್ಲಿಸಿದ್ದೆ.

ಇಷ್ಟು ದೀರ್ಘ ಕಾಲದ ಬಳಿಕ ಕೊರೊನಾ ವಿರಾಮ ಕಾಲದಲ್ಲಿ ನನ್ನ ಮೂರು ಕೃತಿಗಳು ಸಿದ್ಧವಾಗಿ ಮತ್ತೆ ಬರೆಯಲು ಕೈಯಲೇನೂ ಇರದಾದಾಗ, ಪುನಃ ನನ್ನ. "ದ ಫಾರ್ ಪೆವಿಲಿಯನ್ಸ್ " ಅನುವಾದವನ್ನು ಕೈಗೆತ್ತಿಕೊಳ್ಳುವ ಹಂಬಲವಾಯಿತು. ಡಾ. ಪುರುಷೋತ್ತಮ ಬಿಳಿಮಲೆ ಅವರೊಡನೆ ಈ ಬಗ್ಗೆ ಮಾತನಾಡಿದಾಗ, ಅನುವಾದ ಅಕಡೆಮಿಯ ಡಾ.ಗಿರೀಶ್ ಭಟ್ ಅಜಕ್ಕಳ ಅವರನ್ನು ಸಂಪರ್ಕಿಸುವಂತೆ ತಿಳಿಸಿದರು. ಹಾಗೆ ಸಮೀಪಿಸಿದಾಗ,

ಡಾ. ಗಿರೀಶ್ ಭಟ್ ಅವರು, ಮೂಲ ಹಕ್ಕುದಾರರ ವಿಳಾಸ, ಫೋನ್ ನಂಬರ್ ಇತ್ತರೆ, ಅನುಮತಿಗಾಗಿ ಅಕಾಡೆಮಿ ಪ್ರಯತ್ನಿಸುವುದಾಗಿ ತಿಳಿಸಿದರು. ಆಗ ಪೂನಾದಲ್ಲಿದ್ದ ನನ್ನ ತುಷಾರ್, ಕೇಳಿದೊಡನೆ ಆ ಮಾಹಿತಿಯನ್ನು ಒದಗಿಸಿ ಕೊಟ್ಟ. ಹೀಗೆ ಪುನರಾರಂಭಿಸಿದ ಅನುವಾದ ಬಾಳಲ್ಲಿ ಬಂದೆರಗಿದ ಅನಿರೀಕ್ಷಿತ ತಿರುವಿನಿಂದಾಗಿ ಪುನಃ ಕೆಲಕಾಲ ಸ್ಥಗಿತವಾಗಿತ್ತು. ಬರವಣಿಗೆಯಿಂದಲೇ ನಾನು ದೂರವಾದ ಹೊತ್ತಿನಲ್ಲಿ ಪ್ರಿಯಳಾದ ಕಿರಿಯ ಬಂಧು ಒಬ್ಬಳು, ,"No, Aunty, you should write a book and dedicate it to Tushar", ಎಂದಳು. ಹಾಗೆ ಪುನಃ ಕೈಗೆತ್ತಿಕೊಂಡ ಅನುವಾದ ಮುಗಿಯುತ್ತಾ ಬಂದಿದೆ.

ಹಿಮಾಲಯ ತಪ್ಪಲಿನಲ್ಲಿ ಜನಿಸಿದ ಆಶ್ ಟನ್ ಹಿಲರಿ ಅಕ್ಬರ್ ಮಾರ್ಟಿನ್ ಬ್ರಿಟಿಶ್ ಸಂಜಾತನಾಗಿದ್ದರೂ ತನ್ನ ಇಂಡಿಯನ್ ಅಸ್ಮಿತೆಯ ಹುಡುಕಾಟದಲ್ಲಿ ದೆಹಲಿ, ಮುಂಬೈ, ಪಂಜಾಬ್, ರಾಜಸ್ಥಾನ, ಗುಜರಾತ್, ಮತ್ತೆ ಅಫ್ಘಾನಿಸ್ತಾನಗಳಲ್ಲಿ ಸಾಗುವ ದಾರಿಯುದ್ದದ ವಿಹಂಗಮ ದೃಶ್ಯಗಳು, ರಾಜ ಮನೆತನಗಳ ಒಳಸಂಚುಗಳು, ಆರಂಭದ ಸಿಪಾಯಿ ದಂಗೆಯ ಹೃದಯವಿದ್ರಾವಕ ದೃಶ್ಯಗಳು, ಬರ್ಬರ ಸತೀ ಪದ್ಧತಿ, ಬ್ರಿಟಿಶ್ ಇಂಡಿಯಾ ಹಾಗೂ ಗೈಡ್ಸ್ ಸೇನೆಯ ಪರಾಕ್ರಮ, ಅಫ್ಘಾನ್ ಯುದ್ಧದ ರೋಚಕ ಸನ್ನಿವೇಶಗಳು, ಹಿಮವತ್ಪರ್ವತಗಳ ಹಿನ್ನೆಲೆಯಲ್ಲಿ ಚಿಗುರೊಡೆದು , ರಾಜಸ್ಥಾನದ ಮರುಭೂಮಿಯಲ್ಲಿ ವಿಕಸಿಸುವ ಆಶ್ -ಜೂಲಿಯರ ರೋಚಕ ಪ್ರಣಯ ಕಥಾನಕ ಹಾಗೂ ಶೌರ್ಯಗಾಥೆಯದು. ಅದು ಪ್ರಕಟವಾಗಿ ಕನ್ನಡ ಸಾಹಿತ್ಯ ಭಂಡಾರಕ್ಕೆ ಇನ್ನೊಂದು ಕೃತಿ ರತ್ನ ಸೇರ್ಪಡೆಯಾಗುವುದನ್ನೇ ನಾನು ಕಾಯುತ್ತಿರುವೆ.

***

ಮೇಡಂ, ಶೀಘ್ರದಲ್ಲಿಯೇ ತಮ್ಮ ನೂತನ ಕೃತಿಗಳು ಓದುಗರಿಗೆ ದಕ್ಕಲಿ ಎಂಬ ಶುಭ ಆಶಯ ನಮ್ಮೆಲ್ಲರದು. ಸುದೀರ್ಘವಾಗಿ ತಮ್ಮ ಅಮೂಲ್ಯ ಸಮಯವನ್ನು, ಸಾಹಿತ್ಯ ಕ್ಷೇತ್ರದ ಸಾಧಕ ಬಾಧಕಗಳನ್ನು ನಮ್ಮೊಡನೆ ಹಂಚಿಕೊಂಡದ್ದಕ್ಕಾಗಿ ನಮ್ಮ "ಪುಸ್ತಕ ಅವಲೋಕನ" ಬಳಗದ ಸದಸ್ಯರ, ನಿರ್ವಾಹಕರ, ಓದುಗ ಮಿತ್ರರ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

- ಕದ್ರಿಕಂಬ್ಳ ರೇಖಾದೇವಿ. ವೀಣಾ ನಾಯಕ್, ನಿರ್ವಾಹಕರು.




# PUZZLES & TEASERS

**I. WORD PUZZLES**

1. WHAT FISH COSTS THE MOST ?
2. WHAT WORD CONTAINS 26 LETTERS BUT HAS ONLY 3 SYLLABLES ?
3. WHAT KIND OF CUP DOESN'T HOLD WATER ?
4. WHAT DO YOU BURY WHEN IT'S ALIVE AND DIG UP WHEN IT IS DEAD ?
5. WHAT'S ALWAYS FOUND ON THE GROUND BUT NEVER GETS DIRTY ?
6. WHAT IS HEAVIER, A POUNDOF TURKEY OR A POUND OF GRAVY ?
7. WHAT RUNS AROUND A WHOLE YARD WITHOUT MOVING ?

**II. FIND THE WORD**

A.





B.





**III. GUESS THE SWEETS**


I




II




III




**IV. DENTIFY THE BRAND (EXAMPLE: DAAG ACHE HAI ANS: SURF EXCEL)**

1. THANDA MATLAB
2. HAR GHAR KUCH KEHATA HAI
3. KUCH MEETHA HO JAYE
4. YE DIL MANGE MORE
5. THE COMPLETE MEN
6. SAB KI PASAND
7. TASTE THE THANDAR
8. KHUSHIYON KI HOME DELIVERY
9. KYUKI HAR CUP MAIN HAIEK KAHANI
10. JUST DO IT

**V. UNSCRAMBLE THE COLOURS**

1. URGBNOYU
2. AVLNERDE
3. YANC
4. OLACR ANS
5. AGNTEMA
6. URQIUTEO
7. ALLIC
8. VIRYO

## PUZZLES & TEASERS ANSWERS

I. GUESS THE TAG LINE:1). Life Huoy hai Jahan Tandarusti Hai Wahah, 2). Zindagi Ke Saath Bhi , Zindagi Ke Baad Bhi, 3). Desh Ka Namak, 4) Dimag Ki Batti Jala De, 5). Sahi Hai.

II.1). DDLJ, 2). 3 Idiots, 3). Munnabhai MBBS, 4). Dewaar, 5). Jab We Met.

III. 1). Failure, 2). Fairy, 3). Fake, 4). Famished, 5). Famous.

IV. The Missing Number is 16.

V. 1). ETHIOPIA, 2). VIETNAM, 3).FINLAND.

*Compiled by: Mr Ananth Banwasi*

# ಊಟದ ಶಿಸ್ತು ಮತ್ತು ಆರೋಗ್ಯ!

- ಕೊಳ್ಳೇಗಾಲ ಶರ್ಮ

ನಮ್ಮ ಮನೆಯಲ್ಲಿ ಇರುವವರು ಮೂರೇ ಜನರಾದರೂ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವುದು ಅಪರೂಪ. ನನಗೋ ಕಚೇರಿಗೆ ಹೋಗುವ ಆತುರ. ಸಿಕ್ಕದ್ದನ್ನು ಬಾಯಿಗೆ ತುರುಕಿ ಓಡುತ್ತೇನೆ. ಮನೆಯವಳಿಗೆ ನಮ್ಮಿಬ್ಬರಿಗೂ ಊಟ-ತಿಂಡಿ ಕೊಡುವ ಜವಾಬ್ದಾರಿ. ನಮ್ಮದೆಲ್ಲ ಮುಗಿದ ಮೇಲೆ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಾಳೆ. ಇನ್ನುಳಿದದ್ದು ಮಗ ಕಾಲೇಜಿನಿಂದ ಯಾವಾಗ ಬರುತ್ತಾನೋ ಆಗ ಊಟ, ಕ್ಯಾಂಟೀನಿನಲ್ಲಿ ಏನು ಸಿಗುತ್ತದೋ ಅದುವೇ ಮೃಷ್ಟಾನ್ನ! ಕೆಲಸ ಮಾಡೋದೇ ಹೊಟ್ಟೆ ಹೊರೆಯೋಕೆ. ಹೀಗೆ ಊಟವನ್ನು ಸರಿಯಾಗಿ ಮಾಡದಿದ್ದರೆ ಹೇಗೆ? 'ಊಟದಲ್ಲಿ ಶಿಸ್ತಿರಬೇಕು. ಹೇಗೆಂದರೆ ಹಾಗೆ, ಯಾವಾಗ ಅಂದರೆ ಅವಾಗ, ಏನೆಂದರೆ ಅದು ತಿನ್ನುವುದಲ್ಲ" ಅಂತ ಅಜ್ಜಿ ಮೊಮ್ಮಗನನ್ನು ಬೈಯುವ ರೀತಿಯಲ್ಲಿ ನಮ್ಮೆಲ್ಲರಿಗೂ ಶಿಸ್ತಿನ ಪಾಠ ಹೇಳುತ್ತಿರುತ್ತಾರೆ.

ಹೊಟ್ಟೆ ತುಂಬಿದರೆ ಸಾಕಲ್ಲ. ಊಟಕ್ಕೂ ಶಿಸ್ತೇ? ಅವೆಲ್ಲ ಹಳೆಯ ಪರಂಪರೆ ಅನ್ನುವವರಿಗೆ ಇದೋ ವಿಜ್ಞಾನ ಜಗತ್ತಿನಿಂದ ಒಂದು ಕಿವಿಮಾತು. ಇಂದಿನ ಕಾಲದ ಖಾಯಿಲೆಗಳಾದ ಡಯಾಬಿಟೀಸ್, ಹೊಟ್ಟೆಯಹುಣ್ಣು ಮುಂತಾದುವಕ್ಕೂ ಊಟದ ಶಿಸ್ತಿಗೂ ಸಂಬಂಧವಿದೆ ಎನ್ನುವ ಕೌತುಕಮಯ ಸಂಶೋಧನೆ ಮೊನ್ನೆ ಪ್ರಕಟವಾಗಿದೆ. ಪ್ರೊಸೀಡಿಂಗ್ಸ್ ಆಫ್ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಪತ್ರಿಕೆಯಲ್ಲಿ ಫ್ರೆಂಚ್ ವಿಜ್ಞಾನಿ ಪಿಯರಿ ಶಾಂಬನ್ ಮತ್ತು ಸಂಗಡಿಗರು ಹೀಗೊಂದು ಸುದ್ದಿ ಪ್ರಕಟಿಸಿದ್ದಾರೆ. ಹೊತ್ತಲ್ಲದ ಹೊತ್ತಿನಲ್ಲಿ ಊಟ ಮಾಡುವವರ ದೇಹದಲ್ಲಿ ಆಗುವ ಸೂಕ್ಷ್ಮ ಬದಲಾವಣೆಗಳು ನಮ್ಮ ಜೀರ್ಣಕ್ರಿಯೆಯ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಇದಕ್ಕೂ ಹೀಗೆ ಹೊತ್ತಲ್ಲದ ಹೊತ್ತಿನಲ್ಲಿ ಊಟ ಮಾಡುವವರಲ್ಲಿ ಕಂಡು ಬರುವ ಡಯಾಬಿಟೀಸ್, ರಕ್ತದೊತ್ತಡ, ಬೊಜ್ಜು ಮುಂತಾದ ಖಾಯಿಲೆಗಳಿಗೂ ಸಂಬಂಧವಿದೆ ಎಂದು ಇವರು ನಿರೂಪಿಸಿದ್ದಾರೆ.

ಹೊತ್ತಲ್ಲದ ಹೊತ್ತು ಎಂದರೇನು ಎಂದು ಕೇಳಬೇಡಿ.ಯಾರು ಏನು ಮಾಡಿದರೇನು, ಮಾಡದಿದ್ದರೇನು ಬೆಳಗಾಗುವುದು ನಿಲ್ಲುವುದಿಲ್ಲ ರಾತ್ರಿ ಆಗುವುದು ತಪ್ಪುವುದಿಲ್ಲ ಎನ್ನುವ ಮಾತು ಕೇಳಿದ್ದೀರಿ. ಬೆಳಗಾಗುವುದಕ್ಕೂ ರಾತ್ರಿ ಆಗುವುದಕ್ಕೂ, ನಮ್ಮ ನಿತ್ಯದ ಚಟುವಟಿಕೆಗಳಿಗೂ ನೇರ ಸಂಬಂಧವಿದೆ ಎನ್ನುವುದು ವಿಜ್ಞಾನಿಗಳ ಅಂಬೋಣ. ನಮ್ಮದಷ್ಟೇ ಅಲ್ಲ. ಬಹುತೇಕ ಪ್ರಾಣಿಗಳ, ಗಿಡ-ಮರಗಳ ಚಟುವಟಿಕೆಗಳೂ ಹಗಲು-ರಾತ್ರಿಯ ಜೊತೆಗೆ ತಳುಕಿಕೊಂಡಿವೆ. ಉದಾಹರಣೆಗೆ: ಸೂರ್ಯ ಉದಯಿಸಿದ್ದನ್ನ ನೀವು ಕಂಡಿರೋ ಇಲ್ಲವೋ, ಬೆಳಗ್ಗೆ ಸೂರ್ಯೋದಯದ ಸಮಯಕ್ಕೆ ಎಚ್ಚರವಾಗುವುದು ತಪ್ಪುವುದಿಲ್ಲ. ಹಾಗೆಯೇ ರಾತ್ರಿ ನೀವು ಎಷ್ಟೇ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಎಚ್ಚರವಿರಬೇಕೆಂದರೂ ತೂಕಡಿಸುವುದು ತಪ್ಪುವುದಿಲ್ಲ, ಬೆಳಗೆಲ್ಲ ಎಚ್ಚರ. ರಾತ್ರಿಯಾಗುತ್ತಿದ್ದಂತೆ ನಿದ್ರೆ,

ಹಾಗಿದ್ದರೆ ಬೆಳಗಾಗದಿದ್ದರೆ ನಾವು ಹಾಸಿಗೆ ಬಿಟ್ಟು ಏಳುವುದೇ ಇಲ್ಲವೆನ್ನಬೇಡಿ, ವಿಜ್ಞಾನಿಗಳು ಕಂಡ ಹಾಗೆ ಇದೊಂದು ಸಹಜ ಚಕ್ರ. ಬೆಳಗಾಗುತ್ತದೆಯೋ ಇಲ್ಲವೋ, ನಿದ್ರೆಯಾದ ಮೇಲೆ ಎಚ್ಚರವಾಗಲೇ ಬೇಕು. ಆನಂತರ ಮತ್ತೆ ನಿದ್ರೆಗೆ ಮರಳಲೇ ಬೇಕು. ಈ ಚಕ್ರವನ್ನು ದೈನಂದಿನ ಲಯ ಎಂದು ಕರೆದಿದ್ದಾರೆ. ಹೀಗೆಯೇ ವಾರ್ಷಿಕ ಲಯವೂ ಇರಬಹುದು. ಒಟ್ಟಾರೆ ಎಲ್ಲ ಚಟುವಟಿಕೆಗಳೂ ಲಯಬದ್ಧವಾಗಿ ಮರುಕಳಿಸುತ್ತವೆ ಎನ್ನುವುದು ಸತ್ಯ. ಇದನ್ನೇ ಜೈವಿಕ ಗಡಿಯಾರ ಎಂದು ವಿಜ್ಞಾನಿಗಳು ಗುರುತಿಸಿದ್ದಾರೆ.

ಲಯವನ್ನು ಕೆಡಿಸಿದರೆ ಏನಾಗಬಹುದು ? ಅರ್ಥಾತ್ ಬೆಳಗಿನ ಚಟುವಟಿಕೆಯನ್ನು ರಾತ್ರಿ, ರಾತ್ರಿ ಮಾಡಬೇಕಾದದ್ದನ್ನು ಬೆಳಗ್ಗೆ ಮಾಡಿದರೆ ಏನಾಗಬಹುದು ? ಶಿವರಾತ್ರಿ ಸಂಭವಿಸುವುದು ಇದೇ ಕಾರಣಕ್ಕೆ ನಿದ್ರೆ ಮಾಡಬೇಕಾದ ಹೊತ್ತಿನಲ್ಲಿ ಅದನ್ನು ತಡೆದು ಜಾಗರಣೆ ಇರುತ್ತೇವಲ್ಲ ಈ ಸಾಹಸಕ್ಕೆ ಅದು ಹಬ್ಬ ಎನಿಸುತ್ತದೆ. ಶಿವರಾತ್ರಿಯಂತೆ ನಿತ್ಯವೂ ಜಾಗರಣೆ ಮಾಡಿದೆವೆನ್ನಿ ಆಗ ತುಸು ದಿನಗಳವರೆಗೆ ಹಗಲು ಅರೆಬರೆ ನಿದ್ರೆ ಮಾಡುತ್ತೇವೆ. ಕೊನೆಗೆ ಹಗಲೆಲ್ಲ ನಿದ್ರೆ ಮಾಡಿ ಸಂಜೆ ಸೂರ್ಯ ಮುಳುಗುವ ವೇಳೆಗೆ ಬೆಳಗಾಗುವುದಕ್ಕೆ ಆರಂಭವಾಗುತ್ತದೆ. ಬೆಳಗ್ಗೆ ಸೂರ್ಯ ಉದಯಿಸುವಾಗ ನಿದ್ರೆ ಬರಲಾರಂಭಿಸುತ್ತದೆ. ನಿಮ್ಮ ದೇಹದ ಗಡಿಯಾರ ಲಯ ತಪ್ಪಿರುತ್ತದೆ. ಇದುವರೆಗಿನ ತಿಳುವಳಿಕೆಯ ಪ್ರಕಾರ ಲಯಗೆಟ್ಟ ಗಡಿಯಾರ ಮರಳಿ ಮೊದಲಿನ ಲಯವನ್ನು ಪಡೆಯುತ್ತದೆಂದು, ಇದರ ಕೀಲಿ ನಮ್ಮ ಮಿದುಳಿನಲ್ಲಿರುವ ನರಕೋಶಗಳ ಒಂದು ಪುಟ್ಟ ಗಂಟಿನಲ್ಲಿ ಇದೆ ಎಂದು ತಿಳಿದಿತ್ತು. ಈ ಗಂಟನ್ನು ಸೂಪ್ರಕಯಾ ಸ್ಯಾಟಿಕ್ ನ್ಯೂರಾನ್ (ಎಸ್.ಸಿ.ಎನ್) ಎಂದು ಕರೆಯುತ್ತಾರೆ. ಪಿಯರಿ ಶಾಂಬನ್ ಅವರ ಸಂಶೋಧನೆ ತಿಳುವಳಿಕೆಗೆ ತುಸು ಗಾಬರಿಯಾಗುವಂತಹ ವಿಷಯಗಳನ್ನು ಕೂಡಿಸಿದೆ .

ನಮ್ಮ ನಿತ್ಯದ ಚಟುವಟಿಕೆಗಳು ಈ ಸಹಜ ಲಯವನ್ನು ಮೀರಿ ಹೆಚ್ಚು ಕಾಲ ನಡೆದಿದ್ದೇ ಆದರೆ ಎಸ್.ಸಿ.ಎನ್ ಕೀಲಿಯ ನಿಯಂತ್ರಣವನ್ನೂ ಮೀರಿ ಶಾಶ್ವತ ಬದಲಾವಣೆಗಳಾಗುತ್ತವೆ. ಇವು ನಮ್ಮ ಕೆಲವು ಕಾಯಿಲೆಗಳಿಗೆ ಕಾರಣವಿರಬಹುದು ಎಂದು ಶಾಂಬನ್ ತಂಡ ಗುರುತಿಸಿದೆಯಂತೆ. ಅಂದ ಹಾಗೆ ಶಾಂಬನ್ ತಂಡ ಸಂಶೋಧನೆ ಮಾಡಿದ್ದು ಇಲಿಗಳ ಮೇಲೆ. ಇಲಿಗಳು ನಮ್ಮ ಹಾಗೆ ಹಗಲು ಓಡಾಡುವುದಿಲ್ಲವಷ್ಟೆ, ಅವು ನಿಶಾಚರಿಗಳು, ಅವುಗಳ ಊಟ–ತಿಂಡಿಯು ಅಷ್ಟೆ ಎಲ್ಲವೂ ನಮ್ಮ ದಿನಚರ್ಯೆಗೆ ವಿರುದ್ಧ, ಅವುಗಳಿಗೆ ಸಹಜವಾದ ರಾತ್ರಿ ಹೊತ್ತಿನ ಊಟದ ಬದಲಿಗೆ ಹಗಲಷ್ಟೇ ಊಟ ಮಾಡಲು ಬಿಟ್ಟು ಏನಾಗುತ್ತದೆಂದು ಶಾಂಬನ್ ತಂಡ ಗಮನಿಸಿದೆ. ಇದೊಂದು ರೀತಿ ಇಲಿಗಳನ್ನು ನಿತ್ಯ ರಾತ್ರಿ ಪಾಳಿ ಕೆಲಸ ಮಾಡಲು ಹೇಳಿದಂತೆ ಅನ್ನಿ. ಸಹಜವಾದ ಚಕ್ರವನ್ನು ಒತ್ತಾಯದಿಂದ ಬದಲಿಸಿದ ಹಾಗೆ ನಿತ್ಯ ಹಗಲು ಶಿವರಾತ್ರಿ ಮಾಡುವ ಈ ಇಲಿಗಳ ಮೈಯಲ್ಲಿ ಯಾವ್ಯಾವ ರಾಸಾಯನಿಕ ಬದಲಾವಣೆಗಳು ಕಾಣುತ್ತವೆ ಎಂದು ಅವರು ವಿಶಿಷ್ಟ ಪ್ರಯೋಗಗಳಿಂದ ತಿಳಿಯಲು ಪ್ರಯತ್ನಿಸಿದ್ದಾರೆ. ಹೀಗೆ ಮಾಡಿದಾಗ ಇವುಗಳ ಉಣಿಸಿನ ಹಾಗೂ ಜೀರ್ಣಕ್ರಿಯೆಗಳ ಲಯ ತಪ್ಪುತ್ತದಷ್ಟೆ. ಈ ಪ್ರಯೋಗಗಳಲ್ಲಿ ಮೊದಲು ಕಂಡದ್ದು ಇಲಿಗಳು ಹಗಲು ಹೊಟ್ಟೆಬಿರಿಯ ಉಂಡರೂ ಅವುಗಳ ರಕ್ತದಲ್ಲಿನ ರಾಸಾಯನಿಕಗಳು ಹಸಿದಾಗ ಇರುವಂತೆಯೇ ಇದ್ದುವು. ಅಂದರೆ ಉಂಡದ್ದು ದೇಹವನ್ನು ಕೂಡಿರಲೇ ಇಲ್ಲ. ನಡುರಾತ್ರಿಯಲ್ಲಿ ಕನಿಷ್ಠವಾಗಿರಬೇಕಿದ್ದ ಇನ್ಸುಲಿನ್ ಈ ಹಗಲುಣುವ ಇಲಿಗಳಲ್ಲಿ ಗರಿಷ್ಠವಾಗಿತ್ತು. ರಕ್ತದಲ್ಲಿನ ಕೊಬ್ಬಿನ ಅಂಶ ( ಮುಕ್ತ ಮೇದಾಮ್ಲಗಳು )ಹಾಗೂ ರಕ್ತದೊತ್ತಡಕ್ಕೆ ಕಾರಣವಾಗುವ ಟ್ರೈಗ್ಲಿಸರೈಡ್ ಅಂಶವು ಹೀಗೆ ಎಡವಟ್ಟು ಕಾಲದಲ್ಲಿ ಇತ್ತು ಜೀರ್ಣಾಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುವ ಲಿವರ್ (ಯಕೃತ್ತು) ನಲ್ಲಿನ ರಾಸಾಯನಿಕಗಳ ಪರಿಸ್ಥಿತಿಯೂ ಹೀಗೆ ಇತ್ತು.

ಹಗಲಿರಬೇಕಾದ್ದು ರಾತ್ರಿ ಕಾಣುತ್ತಿರುವುದಕ್ಕೆ ಎಸ್.ಸಿ–ಎನ್ ನ ನಿಯಂತ್ರಣ ಕಾರಣವೋ ಅಥವಾ ಆಕಾಲದ ಉಣಿಸೇ ಕಾರಣವೋ ಎಂದು ಶಾಂಬನ್ ಪರೀಕ್ಷಿಸಿದ್ದಾರೆ. ಆ ಕಾಲದಲ್ಲಿ (ಹಗಲು) ಉಣಿಸು ನೀಡಿದ ಇಲಿಗಳಿಗೆ ಆನಂತರ ರಾತ್ರಿ ಒಮ್ಮೆ ಗ್ಲೂಕೋಸ್ ಚುಚ್ಚಿದ್ದಾರೆ. ಗ್ಲೂಕೋಸ್ ಆಹಾರ ಜೀರ್ಣವಾದ ನಂತರ ಉತ್ಪತ್ತಿಯಾಗುವ ವಸ್ತುವಷ್ಟೆ ಪ್ರಯೋಗ ಆರಂಭಿಸಿದ ಒಂದೆರಡು ದಿನಗಳಲ್ಲಿ ಹೀಗೆ ಗ್ಲೂಕೋಸ್ ನೀಡಿದಾಗ ಇಲಿಗಳಲ್ಲಿ ದೈನಂದಿನ ಲಯ ಪಲ್ಲಟದಿಂದ ಆಗುವ ಪರಿಣಾಮಗಳು ಮರೆಯಾದುವು. ಆದರೆ ಆನಂತರದ ದಿನಗಳಲ್ಲಿ ನೀಡಿದಾಗ ಪಲ್ಲಟದ ಪರಿಣಾಮಗಳು ಹಾಗೇ ಉಳಿದುಕೊಂಡವು. ಅಂದರೆ ಈ ಪಲ್ಲಟನೆ ಆಹಾರಾಭ್ಯಾಸದಿಂದ ಬಂದದ್ದೇ ಹೊರತು ಎಸ್.ಎ.ಎನ್ನಿಯಂತ್ರಣದಿಂದಲ್ಲ ಎಂದು ತೀರ್ಮಾನಿಸಿದ್ದಾರೆ.

ಈ ಯಾವ ಬದಲಾವಣೆಗಳೂ ಎಸ್ ಸಿ ಎನ್ ನ ಲಯವನ್ನು ತಾಕುವುದಿಲ್ಲ. ಆದರೆ ಇತರೆ ಕ್ರಿಯೆಗಳ ನಡುವಣ ತಾಳಮೇಳ ಬದಲಾಗುತ್ತದೆ. ದೇಹದ ವಿವಿಧ ಕ್ರಿಯೆಗಳು ಒಂದಕ್ಕೊಂದು ತಳುಕಿಕೊಂಡ ಚಕ್ರದಂತೆ ಇರುವುದರಿಂದ ಒಂದರ ಲಯ ತಪ್ಪಿದ ಕೂಡಲೇ ಮತ್ತೊಂದರ ಲಯವು ಬದಲಾಗುತ್ತದೆ ಎನ್ನುತ್ತಾರೆ ಶಾಂಬನ್. ಬಲವಂತವಾಗಿ ನಮ್ಮ ದೈನಂದಿನ ಲಯವನ್ನು ಬದಲಿಸುವುದರಿಂದ ರಾಸಾಯನಿಕ ಕ್ರಿಯೆಗಳಲ್ಲಿ ಉಂಟಾಗುವ ವ್ಯತ್ಯಾಸಗಳೇನು ಎನ್ನುತ್ತಾರೆ ಶಾಂಬನ್.


ಪ್ರಯೋಗಗಳನ್ನು ಇಲಿಗಳಲ್ಲಿ ನಡೆಸಿದ್ದರೂ ಈ ರಸಾಯನಿಕ ಕ್ರಿಯೆಗಳಿಗೂ ನಮ್ಮ ದೇಹದಲ್ಲಿ ಜರುಗುವ ಕ್ರಿಯೆಗಳಿಗೂ ಅಷ್ಟೇನೂ ವ್ಯತ್ಯಾಸವಿಲ್ಲ. 'ಜೈವಿಕ ಗಡಿಯಾರದಲ್ಲಿ ಆಗುವ ಈ ಲಯಪಲ್ಲಟನ ಪಾಳಿಗಳಲ್ಲಿ ಕೆಲಸ ಮಾಡುವವರಲ್ಲಿ ಸಾಮಾನ್ಯವಾಗಿ ಕಾಣಬರುವ ಖಾಯಿಲೆಗಳನ್ನು ಉಂಟುಮಾಡುವಂತಹ ರಾಸಾಯನಿಕ ಕ್ರಿಯೆಗಳನ್ನೇ ತಾಕುತ್ತದೆ." ಎನ್ನುವುದು ಶಾಂಬನ್ ಅಭಿಪ್ರಾಯ, ಅರ್ಥಾತ್ ನಮ್ಮ ಊಟ ಹೇಗಿದೆ ಅನ್ನುವುದು ಅಷ್ಟೆ ಅಲ್ಲ. ನಾವು ಯಾವಾಗ ಊಟ ಮಾಡುತ್ತೇವೆ ಎಂಬುದು ಮುಖ್ಯ ಅಂತಲ್ಲವೇ? ಅಜ್ಜಿ ಇದನ್ನು ತಿಳಿದೆ ಹೇಳಿದಳು ಅನ್ನಬೇಡಿ, ಅಂತೂ ಗೊತ್ತಿದ್ದೋ ಗೊತ್ತಿಲ್ಲದೆಯೋ ಈ ಶಿಸ್ತು ನಮ್ಮ ಆರೋಗ್ಯವನ್ನು ಕಾಪಾಡುತ್ತದೆ ಅನ್ನುತ್ತದೆ ಶಾಂಬನ್ ಸಂಶೋಧನೆ.





**ಶ್ರೀಮತಿ ಮತ್ತು ಶ್ರೀ ಉಮೇಶ ಮಾಸ್ಕೇರಿಯವರು ಫೆಬ್ರವರಿ 1, 2025ರಂದು ಅಸೋಸಿಯೇಷನ್‌ನಲ್ಲಿ ಮಾಘಿ ಗಣಪತಿ ಹಾಗೂ ಸತ್ಯನಾರಾಯಣ ಪೂಜೆಯನ್ನು ನಡೆಸಿಕೊಟ್ಟರು.**


## ಮುಂಬರುವ ಕಾರ್ಯಕ್ರಮಗಳು




### ಮೈಸೂರು ಅಸೋಸಿಯೇಷನ್, ಮುಂಬಯಿ

ಬುಧವಾರ, ಫೆಬ್ರವರಿ 26, 2025
ಸಂಜೆ 5.30ಕ್ಕೆ

**ಮಹಾಶಿವರಾತ್ರಿ ಪೂಜೆ**



ಹಾಗೂ
ಪ್ರಸಾದ ವಿನಿಯೋಗ

ಸ್ಥಳ : ಮೈಸೂರು ಅಸೋಸಿಯೇಷನ್, ಮುಂಬೈ
393, ಭಾವು ದಾಜಿ ರಸ್ತೆ, ಮಾಟುಂಗ,
ಮುಂಬೈ – 400 019.

ಎಲ್ಲರಿಗೂ ನಲು ಬರುವು

Sunday, March 9, 2025 **Prize Distribution** Winners of **Music Competition** held on 25/08/2024
**Venue :** The Mysore Association Mumbai 393, Bhau Daji Road Matunga, Mumbai-400019

## THE MYSORE ASSOCIATION, BOMBAY

Along with Shiriranga Family

**'SHRIRANGA RANGOTSAVA'**

### Three Days Theatre Festival

**14th February 2025 To 16th February 2025**



Friday, 14th February 2025 At 6.30 P.M.
**Marathi Drama** : **'Sabse Quatil Mhatari Patil'**
Director - **Shri Yash Pawar & Shri Rushiket Mohite,** M D Natyangan, Parel, Mumbai



Saturday, 15th February 2025 At 6.30 P.M.
**Kannada Drama** : **'Geleya Neenu Haleya Naanu'**
Director - **Dr. Arvind Kulkarni,** Rangasampada, Belagavi



Sunday, 16th February 2025 At 6.30 P.M.
**Kannada Drama** : **'Ravana Darshanam'**
Director - **Dr. Satish Sasvehalli,** Hongirana Troupe Shimoga

*Venue:* The Mysore Association's Auditorium 393, Bhau Daji Roa
Matunga (Central), Mumbai -400 019.

*All Are Cordially Invited*

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077